ಕನ್ನಡ ಕಾವ್ಯಮಾಲೆ

ಬಂಡ್ವಾಳ್ವಿಲ್ಲದ ಬಡಾಯಿ

ಅಥ್ವಾ

ಹೀಗೂ ಉಂಟೇ?

ಟಿ. ಪಿ. ಕೈಲಾಸಂ

ಪಾತ್ರಗಳು

ಆಹೋಬ್ಲು: ಬುಳ್ಳಾಪುರದ ಲಾಯ್ರಿ

ಜೀವು: ಈತನ ಪತ್ನಿ

ಮುದ್ಮಣಿ: ಈತನ ಕುಮಾರ

ಬಾಳು: ಈತನಿಗೆ ಕೋರ್ಟ್ನಲ್ಲಿ ಜೂನಿಯರ್ ಆಫೀಸ್‌ನಲ್ಲಿ ಕ್ಲಾರ್ಕ್, ಮನೆಯಲ್ಲಿ ಪರಿಚಾರಕ

ಬೋರ: ಈತನ ಎಪ್ಪತ್ತೆರಡು ವಯಸ್ಸಿನ, ಅಲ್ದೆ ಹನ್ನೆರ್ಡಾರ್ಲ ಎಪ್ಪತ್ತೆರಡು ರೂಪಾಯಿ ಸಂಬ್ಳ ಬಾಕಿ ಇರೋ ಜವಾನ

ಪರಶುರಾಮ ಪಟ್ಟರ್,ಕೆಂಪೇಗೌಡ: ಕಕ್ಷಿಗಾರರು

ಕೃಷ್ಣಾವ್, ರಂಗ್ರಾವ್: ಸ್ನೇಹಿತರು

ಸ್ಥಾನ: ಅಹೋಬಲ್ರಾಯ್ರು "ಛೇಂಬರ್ಸು"

ಕಾಲ, ಭಾಷೆ: ಆಧುನಿಕ

ಬಂಡ್ವಾಳ್ವಿಲ್ಲದ ಬಡಾಯಿ

[**ಸ್ಥಾನ** : ಲಾಯ್ರಿ ಅಹೋಬಲ್‌ರಾಯನ ಛೇಂಬರ್ಸು. ಮೇಜಿನ ಮೇಲೆ ಲಾ ಪುಸ್ತಕಗ್ಳ ಕಟ್ಟುಗ್ಳು, ಶಾಯಿ ಕುಡಿಕೆ, ಪೇನ ಇತ್ಯಾದಿ. ಮೇಜಿನ ಸುತ್ತಲೂ ನಾಲ್ಕೈದು ಮುರುಕಲು ಕುಚಿಗ್ಳು. ಸ್ವಲ್ಪ ದೂರ ಪಕ್ಕದಲ್ಲಿ ಒಂದು 'ಗುಮಾಸ್ತೇ ಮೇಜು'.

ಛೇಂಬರ್ಸು: ಎಡ ಮುಂಭಾಗ, ಬಲ ಮುಂಭಾಗ, ಮಧ್ಯೆ ಹಿಂಭಾಗ ಬಾಗಿಲುಗ್ಳು.]

(ಬೋರ ಎಪ್ಪತ್ತೆರಡು ವರುಷಗ್ಳ ತಾಬೆಯಿಂದ ಬಗ್ಗಿದ ಮೈಯಿಂದಲೂ ನೆಲವನ್ನು ಸೋಕಿ ಗುಡಿಸುವ ಬಿಳಿ ಗಡ್ಡದಿಂದಲೂ ಆಡನ್ನು ಬಿಂಬಿಸುತ್ತ ಕೈಯಲ್ಲಿರುವ ಪೊರಕೆಯಿಂದ ನೆಲವನ್ನು ಗುಡಿಸಿ ನೆಲದ ಮೇಲೆ ಹಾಸಿರುವ ಹರಕಲು ಚಾಪೆಯೊಂದನ್ನು ನಿರೀಕ್ಷಿಸುತ್ತಲೇ ಪೊರಕೆಯನ್ನು ನೆಲದ ಮೇಲಿಟ್ಟು ನಿಟ್ಟುಸಿರುಬಿಡುವನು.)

ಬೋರ: ನಮ್ಕುಲಾನೆಲ್ಲಾ ಈ ಕಸ ಗುಡ್ಸೋ ಕಸಬ್ನಲ್ಲೇ ಕಳ್ದೋಯ್ತು! ನಮ್ತಾತ ಮುತ್ತಾತನ್ ಕಾಲದಿಂದ ನಮ್ಮನೇವ್ರೆಲ್ಲಾ ಕಸ ಗುಡ್ಸೀ ಗುಡ್ಸೀ ಗುಡ್ಸೀ... ಈಗ್ನಮ್ಮಟ್ಟೀಲಿ ಉಟ್ಕೊ ಐಕ್ಳೆಲ್ಲಾ ಸೊಂಟ ಮುರ್ಕೊಂಡೇ ಉಟ್ತಾರೆ. ನನ್ಮುಮ್ಮೊಕ್ಳ ಪಾಡಂತೂ ಏಳಾಕ್ಕಾಗಾಕಿಲ್ಲ! ಜಿನಾ ಬೆಳಿಗ್ಗೆದ್ದು ಕಾಲಗುರುಗ್ಳು ಕತ್ರಿಸ್ಕಳ್ದೇ ಇದ್ರೇ... ಕಣ್ಬುಚ್ಕೋತಾರೆ ನಡ್ಯೋವಾಗೆಲ್ಲಾ!...

(ಮನೆಯಾಕೆಯು ಹಿಂಬಾಗಿಲಿನಿಂದ ಪ್ರವೇಶಿಸುವುದನ್ನು ಥಟ್ಟನೆ ಗಮನಿಸಿ ಪೊರಕೆಯನ್ನೆತ್ತಿಕೊಂಡು ಚಾಪೆಯನ್ನು ಬಿರುಸಾಗಿ ಗುಡಿಸಲುದ್ಯುಕ್ತಿಸುವನು)

ಜೀವು: (ಪ್ರವೇಶಿಸಿ, ಚಾಪೆಯ ಮಧ್ಯಭಾಗವನ್ನು ಪೊರಕೆಪಾಣಿಯಾಗಿ ಅಲಂಕರಿಸಿರುವ ಬೋರನನ್ನು ಸಮೀಪಿಸಿ)

ಏನೋ ಇದೂ? ಮನೇನ ಗುಡಿಸ್ತಿಧೀಯಾ, ಇಲ್ಲಾ ಮನೇಲಿರೊ ಒಂದ್ಹರಕ್ಲು ಚಾಪೇನ ಮೇಯ್ತಿಧೀಯಾ? ಮೇಕೆ? ನೀನು ಗುಡಿಸಿದ್ ಲಕ್ಷಣ ಸಾಕು. ಪೊರಕೇನಿಟ್ಬಿಟ್ಟು ರಾಮ್ಸೆಟ್ರಂಗ್ಡೀಗೆ ಹೋಗಿ, ಪಂಚೇರು ಸಕ್ರೆ ಇಸ್ಕೊಂಬಾ.

ಬೋರ: ದುಡ್ರವ್ವಾ?

ಜೀವು: ಛೀ! ದುಡ್ಡಿನ್ ಯೋಚ್ನೆ ನಿನಗ್ಯಾಕೊ? ಶೆಟ್ರೇನಾದ್ರು ದುಡ್ಡಿನ್ ಮಾತು ಎತ್ತಿದ್ರೆ, ಅವರ ಕೇಸ್ ಹೀರಿಂಗು ನಾಳೆ ಅಂತನ್ನು.

(ಎಡಬಾಗಿಲನ್ನು ಸಮೀಪಿಸುತ್ತಿರುವ ಬೋರನಿಗೆ)

ಸ್ವಲ್ಪಿರೋ!

(ಆತ್ಮಗತಂ)

ಇನ್ನೇನ್ಬೇಕ್ ಮನೇಗೆ?... ಸರಿ, ಜ್ಞಾಪ್ಕ ಬಂದ್ಹಾಗೆ adjourn ಮಾಡ್ಕೋಂಡ್ರಾಯ್ತು ನಾಡಿದ್ದೊ ಆಚೆನಾಡಿದ್ದೋ ಸಾಮಾನುಗ್ಳು ಬೇಕಾದ್ಹಾಗೆಲ್ಲಾ!

(ಪ್ರಕಾಶಂ)

ಹೋಗೊ ಶನಿ!

(ಬೋರ ನಿಷ್ಕ್ರಮಣ)

(ಸಿಡುಕು ಮುಖದಿಂದ) ಏನ್ ಹಾಳು ಸಂಸಾರವೊ ಇದು! ಲಾಯ್ರಿಗ್ಳ ಹೆಂಡ್ತಿಗ್ಳ ಹಣೇಬರೆಹವೆಲ್ಲಾ ಹೀಗ್ಕೆ! ಆದ್ರೆ ಪ್ರಪಂಚದಲ್ಲಿರೊ ಲಾಯ್ರಿಗ್ಳೆಲ್ಲಾ ಇವ್ರ ಹಾಗ್ಯೇ? ನಮ್ಮಪ್ಪ ಲಾಯ್ರಿ ಕೆಲ್ಸ ಮಾಡ್ದಾಗ ನಮ್ಮನೆ ಹಜಾರದ ಕಂಬಕ್ಕೆ 'Law' ಗೊತ್ತಿತ್ತು! ಆ ಕಂಬಕ್ಕೆ ಗೊತ್ತಿದ್ದ 'Law'ಲಿ ಎಳ್ಳಷ್ಟಾದ್ರೂ ಇದಕ್ಕೆ ಗೊತ್ತಿದ್ದಿದ್ರೆ ಇಷ್ಟೊತ್ಗೆ ಮಲ್ಲೇಶ್ವರದಲ್ಲಿ ಮೂರ್ಮಾಡಿ ಮನೆ ಕಟ್ಟಹುದಾಗಿತ್ತು! ಯಾಕ್ಹೀಗಿದ್ಯೋ ಕಾಣೆ? ಇಷ್ಟಕ್ಕೂ ಲಾಯ್ರೀಗೆ ಬೇಕಾದದ್ದಲ್ಲಾ ಇದೆ ಇವ್ರಿಗೆ. ಮಾತಿಗೂ ಸುಳ್ಳುಗಳಿಗೂ ಕಮ್ಮಿ ಏನೂ ಇಲ್ಲ. ಇಲ್ಲಾ, ಕೋರ್ಟ್ನಲ್ಲಿ ಬೆಚ್ಚಿದ್ದು ಬಾಯ್ಬಿಡೋಕೆ ಬೆದ್ರಿ ನಾಲ್ಗೇನ್ ನುಂಗ್ಕೊಂಡು ನಡಗ್ತ ನಿಂತಿರುತ್ತೋ? ಇಲ್ಲ, ಜಡ್ಜಿಗ್ಳು ಇವ್ರ ಪೂರ್ವಜನ್ಮದಲ್ಲಿ ಜ್ಞಾತಿಗ್ಳೊ ಏನೋ ಕಾಣೆ! ಮುಖ್ಯ, ಕೇಸುಗ್ಳು ಗೆಲ್ಲದ ಕೆಂಬೂತ!

(ಬೋರನು ಮೇಜಿಗೆ ಒರಗಿಸಿ ಹೋದ ಪೊರಕೆಯನ್ನು ಹಿಡಿದುಕೊಂಡು ನಿಲ್ಲುವಳು)

ಅಹೋಬ್ಲು: (ನೇಪಥ್ಯದಲ್ಲಿ) ಇಷ್ಟೊತ್ನಲ್ಲೇನ್ ಗಲಾಟೆ ನನ್ನ ಛೇಂಬರ್ಸ್‌ನಲ್ಲಿ? (ಹಿಂಭಾಗದ ಮಧ್ಯಬಾಗಿಲಲ್ಲಿ ಕಾಣಿಸಿಕೊಂಡು)

ಏನ್ನೀನೇ ಜೀವು ! ನೀನೇ ಗುಡಿಸ್ತೀಧೀಯಾ!? Poor girl! ಯಾಕೆ, ಬೋರ ಎಲ್ಹೋದ? ಹನ್ನೆರೆಡಾರ್ಲ ಎಪ್ಪತ್ತೆರ್ಡು ರೂಪಾಯಿ ಬಿಟ್ಬಿಟ್ಟು ಎಲ್ತಾನೆ ಹೋದಾನು?

ಜೀವು: ಎಪ್ಪತ್ತೆರ್ಡು ರೂಪಾಯಿ!ಯಾರ್ದೆಪ್ಪತ್ತೆರ್ಡು ರೂಪಾಯಿ!

ಅಹೋಬ್ಲು: ಸಧ್ಯ ಯಾರ್ದೂ ಅಲ್ಲ. ಒಂದ್ವೇಳೆ ನಮ್ಹತ್ರಿದ್ದು, ಅವನಿಗ್ಕೊಟ್ರೆ, ಬೋರಂದು... ಸಂಬಳ, ಒಂದ್‌ಸಂವತ್ಸರದ್ದು.

ಜೀವು: ಇದೇನ್ಣೊಸಲ್ಮೇಲೇ ನಿಂತ್ಕೊಂಡು ಮಾತಾಡ್ತಿಧೀರಿ? ಒಳ್ಳೇದಲ್ಲ. ಒಳಕ್ಬನ್ನೀಂದ್ರೆ.

ಅಹೋಬ್ಲು: Not at all! ನಿನ್ಕೈಲಿ ಪರಕೆ ಇರೋವರ್ಗು ಪ್ರವೇಶಿಸೋದು ಅನುಚಿತ, ಅಪಾಯ! “ಚಾಮರಂ ಪತಿಭೀಕರಂ” ಇತಿ ನನ್ನ್ ಅಮರಃ! ಆ ಪರ್ಕೆ ಆ ಮೂಲೇಲಿಡು.

(ಪ್ರವೇಶಿಸಿ ಜೀವುವನ್ನು ಸಮೀಪಿಸಿ)

ಹೂಂಂ... ಕಾಫಿ ತಗೊಂಡ್ಬಂದ್ಬಿಡು ಬೇಗ! Friendsಗಿಂಡ್ಸ್ ಬಂದ್ಬಿಟ್ಟಾರು.

ಜೀವು: ಕಾಫಿ ಆಗಿದೆ... ಸಕ್ರೇಗೆ ಕಳಿಸಿದೇನೆ ಅಂಗ್ಡೀಗೆ. ಬೋರನ್ನ.

ಅಹೋಬ್ಲು: ಅಂಗ್ಡೀಗೆ! ದುಡ್ಡೆಲ್ಲೀದು?

ಜೀವು: (ತಾತ್ಸಾರದಿಂದ) ಹಯ್ಯೋ! ಬುದ್ದೀಂಬೋದು ನಿಮ್ಮೊಬ್ರಿಗೇನೇವೇಯೇ ಲಾಯ್ರಿ ಹೊಟ್ಟೇಲ್ಹುಟ್ಟಿ... ಲಾಯ್ರಿ ಕೈ ಹಿಡ್ದು... ಕಾಸಿಲ್ದೆ ಒಂದಿಷ್ಟು ಸಕ್ರೆ ತರಿಸೋಕ್ಕೂಡ ಗೊತ್ತಿಲ್ದೆ ಹೋಯ್ತೆ ನನಗೆ!?

(ಭ್ರುಕುಟಿರಚನೆಯಿಂದ ಪಶ್ನಿಸುತ್ತಿರುವ ಪತಿಗೆ)

ಅದೇ ರಾಮ್‌ಶೆಟ್ಟಿ ಕೇಸು, ರಾಮ್‌ಶೆಟ್ಟಿ ಕೇಸೂಂತ ಬಡುಕೊಳ್ತಿದ್ರಲ್ಲ ಮೂರ್ತಿಂಗ್ಳು ಹಿಂದೆ, ಅದ್ರ, “ಹೀರಿಂಗ್ನ” ನಾಳೇಗ್ ಹಾಕ್ಕೊಂಡೆ.

(ಕೋಣೆಯ ಉಸುರನ್ನೆಲ್ಲಾ ಹೀರುತ್ತಾ ಮೂಗನ್ನು ಸೂರಿಗೆತ್ತುವಳು)

ಅಹೋಬ್ಳು: Wonderful womanಉ ಜೀವು!, ನೀನೂ ನಿನ್ನಂಥ wifeಊ ಇದ್ದು ಸ್ವಲ್ಪ Luckಊಗಾನ ಬಂತೋ. Lord ಸಿಂಹನ್ನ ಎತ್ಕುಕ್ಕಿಬಿಡ್ತೇನೆ ಒಂದ್ದಿನ! ಎತ್ತೇ ಕುಕ್ಕಿಬಿಡ್ತೇನೆ, one of these ದಿನಾಸ್!

ಜೀವು: ಹಯ್ಯೋ ಸಾಕ್ನಿಲ್ಸೀಂದ್ರೆ! ನಿಮ್ಮೋರೆ ಮಯ್ಯಿಮತಿ ಇರೊ ಯೋಗ್ಯತೇಗೆ ಇನ್ನೊಬ್ಬನ್ನ ಎತ್ಕುಕ್ಬೇಕೆ? ಅದ್ರಲ್ಲೂ "ಸಿಂಹ"ನಂತೆ ಅವನ ಹೆಸ್ರು! ಯಾರದು?

ಅಹೋಬ್ಳು: ಬಂಗಾಳದ ಲಾಯ್ರಿ ಜೀವು! Practiceಗೆ ಪ್ರಾರಂಭಿಸ್ದ ಪ್ರಾಣಿ. ನಾವೀಗಿಧೇವಲ್ಲಾ... ವಿಜೃಂಭಣೆಯಾಗಿ... ಇದಕ್ಕೂ ಅವನಾಗಿದ್ದದ್ದಕ್ಕೂ ಅಗಳಷ್ಟೂ ಸಂಬಂಧವಿಲ್ಲ. ಒಂದೇ ಮಾತ್ನಲ್ಲಿ ಹೇಳ್ತೇನೆ : ಅವನ ಮನೇಲಿ ಗುಡಿಸೋಕೆ ಕಸಕ್ಕೂಡ ಯೋಗ್ಯತೆಯಿಲ್ಲ. ಇನ್ನು ಊಟ ಉಪಚಾರಗ್ಳೋ; ನೆನ್ನೆ ಅನ್ನ, ಮೊನ್ನೆ ಸಾರು, ಈವತ್ತಿನೆಲೆ, ನಾಳೆ ನೀರು, ನಾಡಿದ್ದು ಊಟ! ಹೀಗಿದ್ದ ನೋಡು ಜೀವು! ಆ ಚಂಚಲಕಟಾಕ್ಷಿ ವರಲಕ್ಷ್ಮಿ ಕಣ್ಣು ಸ್ವಲ್ಪ ಮಿಟಿಕ್ಸಿದ್ಳೂ... ನೆಗೆದ ನೋಡು ಭೂಪ್ತಿ Lord ಪಟ್ಟಕ್ಕೆ! ಜೀವೂ! ಪಾತಾಳದಿಂದ ಈ ಪಾಮರ Lord ಪಟ್ಟಕ್ಕೆ ಎಗರಿರೋವಾಗ ಭೂತಾಳದಲ್ಲಿರೊ ನಾವಿಬ್ರೂ ಇದಕ್ಕಿಂತ ಎತ್ತರವಾಗಿ ಎಗರ್ಬಾರ್ದಾ ಜೀವು!?

(ಎಂದು ಹುಮ್ಮಸ್ಸಿನ ಆವೇಶದಲ್ಲಿ ಜೀವುವನ್ನು ಸಮೀಪಿಸುವನು)

ಜೀವು: (ಜುಗುಪ್ಸೆಯಿಂದ) ಹಯ್ಯೋ ನಿಲ್ಸೀಂದ್ರೆ! ನಿಮ್ಮಾತೆಲ್ಲಾ ಹೀಗ್ಯೇ. ಲಾಗಾಯಿತ್ನಿಂದ ಮರಳ್ಮೇಲೆ ನೀವ್ಕಟ್ತಿರೊ ಮುನ್ನೂರು ಅರಮನೆಗ್ಳ ಜೋತೇಲಿ ಇದೊಂದು ಹೊಸ ಮಹಲ್ಲು. ಈ ಹುಚ್ಚೆಲ್ಲಾ ಬಿಟ್ಬಿಟ್ಟು ಕೇಸುಗಳ್ನ ಓದ್ಕೊಂಡು, ಕೋರ್ಟ್ಗೆ ಹೋಗಿ, ಗೆದ್ದು, ಸಂಪಾದ್ನೆ ಮಾಡಿ, ಹೆಬ್ಬೆಟ್ನಿಂದ ತಲೆ ತುದಿವರ್ಗೂ ಇರೋ ಸಾಲಾನೆಲ್ಲಾ

ತೀರ್ಸಿ, ಸಧ್ಯ ನೆರೆಹೊರ್ಕೆವ್ರು ಕಟ್ಟಿಧಾರಲ್ಲಾ ಪಟ್ಟ... “ಬಂಡ್ವಾಳ್ವಿಲ್ಲದ ಬಡಾಯೀ”ಂತ...ಅದ್ನ ಹೋಗ್ಲಾಡಿಸ್ಕೊಂಡು ಮಾನಮಿಗಿಸ್ಕೊಂಡು ಬದುಕಿದ್ರೆ, ಆಮೇಲೆ... ಈ “Lord” ಪಟ್ಟ ಅಂಬೋ ಬಿಸಿಲ್‌ಕುದ್ರೇನ ನಾವಿಬ್ರೂ ಸವಾರಿ ಮಾಡ್ಬೋದು!

ಅಹೋಬ್ಲು: (ಮೇಜಿನ ಮೇಲೆ ಲಾ ಪುಸ್ತಕದ bind ಹಾಕಿರುವ ಒಂದು ಪುಸ್ತಕವನ್ನು ತೆಗೆದು ಒಳಗಿರುವ Film magazine ಹಾಳೆಗಳನ್ನು ತಿರುವುತ್ತ)

ಹೆಂಗಸ್ರೆಲ್ಲಾ ಹೀಗೆ... ಹುಮ್ಮಸ್ಸಿಲ್ಲ ! No enthusiasm at all!

ಜೀವು: ಹಯ್ಯೋ! ಗೊಂಬೆಗ್ಳು ಹಾಕಿದ Law ಪುಸ್ತಕ ಓದೋದ್ರಿಂದ್ಲೇ ಗೋಳು ಮನೇಗೆಲ್ಲ!

(ಎಡಬಾಗಿಲನ್ನು ಈಕ್ಷಿಸಿ)

ಅದೋ ಬೋರನೂ ಬಂದ, ಸಕ್ರೇನೂ ಬಂತು.

(ಹಿಂಬಾಗಿಲಿನ ಹೊಸಲನ್ನು ಸಮೀಪಿಸುತ್ತ)

Lord ಸಿಂಹನ್ನ ಬಾಯ್ಮಾತ್ನಿಂದ್ಲಾದ್ರು ಎತ್ಕುಕ್ಕಿ ಬರ್ತಿರೊ, ನಾಲ್ಗೆ ಪ್ರಯಾಸಕ್ಕೆ ಒಂದ್ಬೊಂಬು ಕಾಫೀನಾದ್ರು ಬಸ್ಕೊಳ್ಳಿ!

ಅಹೋಬ್ಲು: (ಉತ್ಸಾಹದಿಂದ) Golden girlಉ ಜೀವು! ಪುಟಕ್ಕೆ ಹಾಕಿದ partnerಉ! ಎಷ್ಟು anger ಇದ್ದ್ರೂನೂವೆ... ಏನು ! Loveಉ Loveಏನೇವೇ!

(ಎಡಬಾಗಿಲಿನಿಂದ ಪ್ರವೇಶಿಸಿ ಕೋಣೆಯನ್ನು ಹಾಯುತ್ತಿರುವ ಬೋರನಿಗೆ)

ಬೀದೀಲೇನಾದ್ರು ಬಿಡಿಗಾಸು ಬಿದ್ದಿಧೇಂತ ಬಗ್ನೋಡ್ತ ಬರ್ತಿಧೀಯೇನೋ ಬಕ್ವೇ!?...

(ಸ್ವಗತಂ)

ಚೆನ್ನಾಗ್ ಚುನಾಯಿಸ್ದೆ ಚಾಕರೀಗೆ ಚತುಷ್ಪಾದಾನ!. . .

(ಹಂಬಾಗಿಲಿನಿಂದ ನಿಷ್ಕ್ರಮಿಸುವ ಬೋರನನ್ನು ನೋಡುತ್ತ)

ಅದೊಂದ್ಮಟ್ಗೂ ಒಪ್ಕೊಳ್ಳೇಬೇಕು!... ಯಾವ ಕೆಲ್ಸ ಹೇಳಿದ್ರೂ ಮೈಬಗ್ಗಿ ಮಾಡ್ತಾನೆ... ಮೈಬಗ್ಗಿ ಮಾಡ್ತಾನೆ!

(ಬಲಬಾಗಿಲಿನಿಂದ ನಿಷ್ಕ್ರಮಣ)

ಅಹೋಬ್ಳು: (ಪುನಃ ಪ್ರವೇಶಿಸಿ ಸ್ವಗತಂ) ಬಾಳು ಯಾಕ್ ಇಷ್ಟು lateಉ ಈ ಹೊತ್ತು? ಈ ಹೊತ್ತೇನೂ ಯಾವ ಹೊತ್ತೇನೂ!? ಇವನ ಹಣೇಬರೆಹವೆಲ್ಲಾ lateಉ! ಹತ್ನೇ ತಿಂಗ್ಳಲ್ಲಂತೆ ಹುಟ್ಟಿದ್ದು ಇವ್ನು. ಹುಟ್ಟಿದ್ದೇ lateಉ! ಇರ್ಲೀ! ಹೇಳಿದ್ಕೆಲ್ಸ ಮಾಡ್ತ ಬದಲ್ಮಾತು ಎತ್ತದೆ ತೆಪ್ಪನೆ ದುಡೀತ ಬೆಕ್ಕಿನ್ಹಾಗೆ ಬಿದ್ಕೊಂಡಿದ್ದ ಈ ಕುರಿ ಕಿವೀಗೆ ಯಾರೊ juniorಗೂ clerkಗೂ ಕೆಲಸ್ಗಾರ್ನಿಗೂ ಇರೊ ವ್ಯತ್ಯಾಸಾನ ಯಾವ ಪಾಪಿನೋ ಊದ್ಬಿಟ್ಟಿಧಾನೆ! ಈಗಿಂದೀಚೆಗೆ ದುಡ್ಡು ದುಗಾಣಿ ಅಂತ ಗೊಣಗುಟ್ಟೋಕೆ ಪ್ರಾರಂಭಿಸ್ಬಿಟ್ಟಿದೆ ಈ ಗುಗ್ಗು. ಏತನ್ಮಧ್ಯೆ ಇವರಪ್ಪನ ಹತ್ರ ಒಪ್ಕೊಂಡ ತಿಂಗಳಿಗೆ ಹದ್ನೈದ್ರ ಪ್ರಕಾರ ಇಪ್ಪತ್ತಿಂಗ್ಳ ಸಂಬ್ಳ ಮುನ್ನೂರ್ರೂಪಾಯ್ನ ಮಾತ್ಗೀತು ಏನಾದ್ರು ಎತ್ತಿಗಿತ್ತಿದ್ನೊ, ಮ್ಹ್...ದ್ರೇನು... ನಾನ್ಮಟ್ಗೆ ನನ್ನ usual tactics...diplomacy ಇರೋವರಿಗೂ ಹೇಗಾದ್ರೂ... manage ಮಾಡ್ಕೋಬಹುದು!

(ಎಡ ಬಾಗಿಲನ್ನು ದುರುಗುಟ್ಟಿನೋಡಿ, ಕೂತ ಕುರ್ಚಿಯನ್ನು ಕೂತಹಾಗೆಯೇ ಸೆಳೆಯುತ್ತ ಬಾಗಿಲನ್ನು ಸಮೀಪಿಸಿ)

ಇಕೋ ಬಂದ! ಈಗ stiff ಆಗಿರೋದೇ best thingoo!

(ಪ್ರವೇಶಿಸಿ ಹೊಸಲು ಮೇಲೆ ನಿಂತ ಬಾಳುವಿಗೆ ಬಿರುಸಾಗಿ ಆರ್ಭಟಿಸುತ್ತ)

What is this, I say! What is the meaning of this, I say? What is the time, I say! What are you, where are you, when are you, why are you, what is it I say!? ಇದೇನು Chambersಓ ಛತ್ರಾನೊ? ಕಾಲ ದೇಶ ವರ್ತಮಾನ ಗೊತ್ತಿಲ್ವೆ ನಿನಗೆ? ಏನರ್ಥ? ನೀನೇನು ಮನುಷ್ಯನೇ, ಮೃಗವೇ? What is it? Duty, Docility, Disciplineನ Dictionaryಲಾದ್ರು ನೋಡಿಧಿಯಾ? What is the meaning of this? ಏನಿದು ಹುಚ್ಚು, ಬೊಗಳೂ ಬಾಳು!

ಬಾಳು: (ಮುಂದಕ್ಕೆ ಬಂದು ಸೊಟ್ಟಮೋರೆಯನ್ನು ಧರಿಸಿ) ಏನ್ ಸಾರ್ ಇದು? ಯಾರ್ನ ಹೆದ್ರಿಸ್ತೀರಿ ಸಾರ್! ಓಹೋಃ ಏನ್ಸಾರ್ ಇದು? ನಮ್ಮಪ್ಪ ಹೇಳ್ದ ಸಾರ್, ನಮ್ಮ Fatherಉ: ನೀನು ಅಹೋಬಲ್ರಾಯ ರೂಮಿಗೆ ಹೋದಾರಭ್ಯ...

ಅಹೋಬ್ಲು: (ಅಡ್ಡ ಮಾತಾಗಿ) Roomoo ಅನ್ಬೇಡ ! Chambersಉ ಅನ್ನು.

ಬಾಳು: ಆಗ್ಲಿಸಾರ್. ನಮ್ಮಪ್ಪ ಹೇಳಿದ್ದಿಷ್ಟು: "ನೀನು ಅಹೋಬಲ್ರಾಯ್ರ Chambersಗೆ ಹೋದಾಗ್ನಿಂದ Chambersನ ಮನೆ ಸಮೇತ ಗುಡ್ಸೋದು; ಬಾವಿಯಿಂದ ನೀರು ಸೇದಿ ಹಂಡೆ ತುಂಬೋದು; ಮಾರ್ಕೆಟ್ಟಿಗೆ ಹೋಗಿ ತರ್ಕಾರಿ ತಂದ್ಹಾಕೋದು; ನಿಮ್ಕುಮಾರನ್ನ ಸ್ಕೂಲಿಗೆ ತಲಪ್ಸೋದು; ಇನ್ನು ಕೋರ್ಟ್ಗೆ ಟಿಫನ್ ತಕ್ಕೊಂಡ್ಹೋಗೋದೂ ಅಲ್ದೆ ತಿಂಗ್ಳ

ತಿಂಗ್ಳೂ ಐದ್ದಿನವಾದ್ರೂ ಅಡಿಗೆ ಮಾಡೋದು; ಹೀಗೆಲ್ಲಾ ನಿನ್ರಾಯ್ರು ಮನೇಲಿ ಕಲಿಯೊ 'Law'ನ ಇಲ್ಲೇ ಮನೇಲೇ ಕಲಿ! ಸಧ್ಯ ಈ ಇಪ್ಪತ್ತಿಂಗ್ಳು ಹದ್ನೈದು ರೂಪಾಯಿ ಪ್ರಕಾರ ನಿನಗೆ ಬರಬೇಕಾದ ಮುನ್ನೂರು ರೂಪಾಯ್ನ ನಿನ್ ರಾಯ್ರು ಕೈಯಿಂದ ಇಸ್ಕೊಂಡು ಮನೇಗ್ಬಂದು ಸೇರು" ಅಂತಂದ್ರು ಸಾರ್... ನಮ್ಮ Fatherಉ!

ಅಹೋಬ್ಲು: (ನಾಲಗೆಯನ್ನು ಕಚ್ಚಿಕೊಳ್ಳುತ್ತ, ಸ್ವಗತಂ) ಹೌದು!... too far ಹೋಗ್ಬಿಟ್ಟೆ! Wormಊ ಕೂಡ turn ಮಾಡುತ್ತೇಂಬೋದ್ನ ಮರ್ತದ್ದಕ್ಸರ್ಯಾಗಿ... ನನ್ನಿಂದ ಜೀವ ಬಂದ ಈ ಜಂತು ನನ್ನ ಮೇಲೆ ಹೆಡೆ ಎತ್ತಿ ಮುನ್ನೂರು ರೂಪಾಯಿ arrearsನೂ ಕೇಳುತ್ತಲ್ಲಾ! ಆ !?

(ಕ್ಷಣ ಮಾತ್ರ ಮುಖವನ್ನು ಗಂಟುಹಾಕಿಕೊಂಡು ಯೋಚಿಸಿ, ತತ್‌ಕ್ಷಣವೇ ಮುಖದ ಗಂಟನ್ನು ಬಿಚ್ಚಿ ಸ್ಮಿತವಕ್ತ್ರನಾಗಿ, ಸ್ವಗತಂ)

But...tactics changeಮಾಡ್ಬೇಕು. Stiff method ಬಿಟ್ಬಿಟ್ಟು, soft ಆಗಿ ಪುಂಗಿ ಬಾರಿಸ್ಬೇಕು. ಈ hood ಎತ್ತಿದ ಕ್ರಿಮೀಗೆ!

(ಪ್ರಕಾಶಂ)

ಬಾಳು, ಹೀಗ್ಬಾ!

(ಎದ್ದು ಬಾಳುವನ್ನು ಕೈಹಿಡಿದು ಕರೆದುಕೊಂಡು ಹೋಗಿ ಬೆಂಚಿನ ಪಕ್ಕದ ಒಂದು ಕುರ್ಚಿಯಲ್ಲಿ ಕೂಡಿಸಿ, ತಾನೂ ಕುಳಿತುಕೊಂಡು ಗಂಭೀರ ವಿನಯ ಮಮತೆಗಳು ಮಿಶ್ರಿತವಾದ ಮಧುರ ಭಾವವನ್ನು ತಾಳಿ)

ಮಗು, ನೀನೋ youngಉ! ನಾನೋ oldಉ! ನಿನ್ನ bloodಓ ಬಿಸಿ! ನನ್ನ ರಕ್ತವೊ coldಉ, ಎಳೆ ನಾಗರಹಾವು ಹೆಡೆ ಎತ್ಕೊಂಡು ಬುಸುಗುಟ್ಟೋದು ಅದಕ್ಕೊಂದುತ್ತೆ. ಯಾಕೆ? ತಜ್ಜನ್ಮ, ತದ್ವಯಸ್ಸು, ತದ್ರಕ್ತ, ತದ್ಬಿಸಿರಕ್ತ, ಸಹಜ. ನಾನು oldಉ. ನನ್ನ bloodಉ coldಉ. ನಿನ್ನ young ವಯಸ್ಸಿನ ರೇಗೋದ್ನ ಗಮನಿಸ್ದೆ, ನಿನ್ಕಿರ್ಲಾಟಾನ ಕಿವಿಗ್ಹಾಕ್ಕೊಳ್ದೆ ಮನಸ್ಸಿಗೆ ಶಾಂತಿ ತಂದ್ಕೊಂಡು, ನಿನ್ನ ಮುಂದಕ್ಕೆ ತರೋದು ಅಂಬೊ ಯಾವ ನಿಮಿತ್ತಾನ ಮುಂದಿಟ್ಕೊಂಡು, ನಿನ್ನ ನನ್ನ Chambersನ ಹೊಸಲು ದಾಟ್ಸಿ ಇಪ್ಪತ್ತಿಂಗ್ಳು ಹಿಂದೆ ವಹಿಸ್ಕೊಂಡ್ನೊ... ಅದೇ ನಿಮಿತ್ತಾನ ಮರೀದೆ, cold ಕಬ್ಬಿಣದ್ಹಾಗೆ rigid ಆಗಿ stiff ಆಗಿ ಈಗ್ಲೂ ಹೇಳ್ತಿರೋದ್ನ calm ಆಗಿ ಕೇಳು, ಮಗು, ಕೇಳು: ನಿನ್ನ, ಬಾಳು! ನಿಮ್ಮಪ್ಪ, ನಿಮ್ತಂದೆ, ಪಿತ, ಜನಕ ನಿನ್ಕರ್ಕೊಂಡ್ ಬಂದು ಈ Chambersಗೆ, ನಿನ್ನ ಪುಟ್ಕೈನ ನನ್ನ ದೊಡ್ಕೈಲಿಟ್ಟು... ಗದ್ಗದ ಸ್ವರದಿಂದ "ಸ್ವಾಮಿ, ಈ ಕೂಸ್ನ ನಿಮ್ಕೈಲಿಟ್ಟಿಧೇನೆ. ಇದ್ನ ಮುಂದಕ್ತರೋ ಭಾರ ತಮ್ದು. ಈ ಕ್ಷಣದಿಂದ ಈ ಮಗೂಗೆ ತಂದೆ, ತಾಯಿ, ತಮ್ಮ, ತಂಗಿ, ಬಂಧು, ಬಳಗ, ವಿಶಿಷ್ಟವೂ... ಒಟ್ನಲ್ಲಿ ದೇವ್ರೂ, ಅಷ್ಟದಿಕ್ಪಾಲಕ್ರೂ, ಪಂಚಭೂತಗ್ಳೂ ತಾವೇ ಈ ಮಗೂಗೆ, ಇದ್ರ ಮುಂದಿನ್ ಯೋಚ್ನೆ ತಮ್ಮ ಭಾರಾಂ"ತ ನನ್ನ ಮೇಲೆ... ನನ್ನ ಹೆಗಲ್ಮೇಲೆ ಹೇರಿಸ್ದಾಗ ನಿನ್ನ ಜವಾಬ್ದಾರೀನ... ವಿಶ್ವಾಮಿತ್ರ ದಶರಥನ ಕೈಯಿಂದ... ಶಸ್ತ್ರಾಭ್ಯಾಸಕ್ಕೆ ರಾಮಲಕ್ಷ್ಮಣರನ್ನ ವಹಿಸ್ಕೊಂಡು ಅರಣ್ಯಕ್ಕೆ ಕರ್ಕೊಂಡ್ಹೋದದ್ದು ಜ್ಞಾಪಕ ಬಂತು. ದಶರಥನ ಅರಮನೆ ಅನುಕೂಲಗಳೆಲ್ಲಿ? ವಿಶ್ವಾಮಿತ್ರ ರಾಜಪುತ್ರರ್ನ ಕರ್ಕೊಂಡ್ಹೋದ ಅರಣ್ಯದ ಅನಾನುಕೂಲಗಳಲ್ಲಿ? ನಿಮ್ತಂದೆ ಮನೇಲಿ ನೀನು ಅನುಭವಿಸ್ದ ಸುಖ ಸೌಕರ್ಯಗಳ್ನ ಜ್ಞಾಪಿಸ್ಕೊಂಡು ನನ್ನ Law trainingನಲ್ಲಿ ಇರೋ rigid disciplineನ ಸಹಿಸ್ಲಾರ್ದೆ ಹೀಗೆ ಅವಸ್ಥೆಪಡ್ತೀಯೇ ಹೊರ್ತು... ನಾನು ನಿನ್ನ ನೇಮಿಸೋ ಕೆಲಸಗಳಿಗೆ ಇರೊ ಅರ್ಥ ನಿನಗೆ

ಗೋಚರವಾಗೋದಿಲ್ಲಾಂತ ಕಾಣುತ್ತೆ ಮಗು! ನೀನು, ನಾನು ನಿನ್ನ ಕೈಯಿಂದ ಮಾಡ್ಸೊ ಕೆಲಸಗಳ್ನೆಲ್ಲ ಜ್ಞಾಪ್ಕ ಹಾಕ್ಕೊಂಡು ಜ್ಞಾಪಿಸ್ಕೊಳ್ತ ಅಳ್ತಿಧೀಯೇ ಹೊರ್ತು ಆಯಾ ಕೆಲಸಗಳ ಅರ್ಥ ಅಲ್ಲೆ ಅವುಗಳಿಗೂ ನೀನು ಮುಂದಕ್ಕೆ ಬರೋಕೂ ಇರೋ ಸಂಬಂಧದ ಸೂಚನೆ ನಿನಗೆ ಸ್ವಲ್ಪವಾದರೂ ಸೋಕುತ್ಯೆ? ನೋಡು, ಬಾಳು, ನಿನ್ಕೈಲಿ ಕೆಲ್ಸ ತೊಗೊಳ್ತೇನಲ್ಲಾ ಅಂಬೋದ್ದ ಮಟ್ಟಿಗೂ ಗಮನಿಸಿ ರೇಗ್ತೀಯೇ ಹೊರ್ತು, ಯಾಕೀ ಕೆಲ್ಸ ನಿನ್ನ ಕೈಯಿಂದ ಮಾಡೆಸ್ತೇನೆ ಅಂಬೋದ್ನ ಯೋಚ್ಸಿಧೀಯಾ ನೀನು? ನೋಡು, ಬಾಳು: ನಾಳೆಯಿಂದ ಬೋರ ಬೇಡ, ನೀನೇ ಗುಡ್ಸು ಅಂತ ಅಂದೇ ಅಂತಿಟ್ಕೊ, ಮಸ್ಲ! ಆಗ ನೀನು “ಎಲ! ನಮ್ರಾಯ್ರು ಬೋರ್ನ ಹಾಗೆ ಕಸಗುಡಿಸ್ತಾರಲ್ಲಾ” ಅಂತ ರೇಗ್ತೀಯೇ ಹೊರ್ತು... “ಎಲಾ! ನಮ್ರಾಯ್ರು! ನಮ್ಮ Family friendಉ! ನಮ್ಮಪ್ಪನಿಗೆ ಪ್ರಾಣ ಸ್ನೇಹಿತ್ರು! ನನಗೂ, well wisherಉ! ಇಂಥ ನಮ್ರಾಯ್ರು ನನ್ಕೈಲಿ ಪರ್ಕೆ ಕೊಟ್ಟು ಗುಡ್ಸಿಸ್ತಾರಲ್ಲಾ! ಇದರಲ್ಲಿ ಏನೋ ಸೂಕ್ಷ್ಮ ಇಧೆ! ಏನೋ ಗುಟ್ಟಿಧೇ”ಂತ ನನ್ಮೇಲೆ ನಂಬ್ಕೆ ಇದ್ಯೇ? ಊಂ ಹುಂಂಂ! ಇಲ್ಲ! ಯಾಕೆ ? Because you are youungಉ! But young ಆದ್ರೂನೂವೆ, brainsಇರೋ boy ನೀನು. “ಹೌದು, ಕಸ ಗುಡ್ಸೋ ಕೆಲ್ಸಕ್ಕೂ, ನಾನು ಮುಂದೆ ಆಗೋ ಲಾಯ್ರಿ ಕಸಬಿಗೂ, ಸಂಬಂಧವೇನೂ”ಂತ ನಿನಗೆ ತೋಚ್ಯೇ ತೋಚುತ್ತೆ, Explanation ಹೇಳ್ತೇನೆ ಕೇಳು ಮಗು. ಕೇಳು, ನಾಳೆ, ನೀನು ಲಾಯ್ರಿಗ್ಳ ಜೊತೇಲಿ ಲಾಯ್ರಿಯಾಗಿ ಕೋರ್ಟ್ನಲ್ಲಿ ಕೂತಿರೋವಾಗ, ನಿನ್ನ ಜಡ್ಜಿ, ಎಲ್ಲಾ ಲಾಯ್ರಿಗ್ಳ ಮೂತಿಗಳನ್ನೂ ನೋಡ್ತಾ ಬಂದು, ನಿನ್ಮುಖಾನ ನೋಡುತ್ಲೂವೆ 'ಡಂಗ್' ಆಗಿ, “ಎಲಾ ಈ ಲಾಯ್ರಿ intelligenceಊ ಅಂಬೋದು ತಲೆಯಲ್ಲಾ ತುಂಬೀ ತುಂಬೀ ತುಳುಕೀ ತುಳುಕೀ ಕಣ್ಣುಗಳಿಂದ ಹೊರಗೆ ಹೊರಟು ಬಂದು ಮೋರೆಯೆಲ್ಲಾ ಸುರೀತಿರೋ ಬುಧ್ಧಿಯೇ ಇಷ್ಟು ಇರುವಾಗ... ಇವನ್ಮಂಡೇಲಿ ಇರೋ main stock of ಮಿದುಳು

ಎಷ್ಟಾನೇ ಇರಬೇಕೂ"ಂತ ಆಶ್ಚರ್ಯ ಪಟ್ಟದ್ದಲ್ದೆ ಯಾವ್ದಾದ್ರೂ ಒಂದು ಕೇಸಿನ complicated knotty point ತಿಳುಕೊಳ್ಳೋಕೆ ನಿನ್ನ consult ಮಾಡೋಕೆ ತನ್ನ Chambersಗೆ ನಿನ್ನ ಕರೆಸಿಕೊಂಡಾಂತಿಟ್ಕೊ, ಮಸ್ಲ. ಆಗ ನೀನು ಆ ಜಡ್ಜಿ Chambers ಪ್ರವೇಶಿಸುತ್ಲೂವೆ ಆತ, "ಎಲ! ಇಂಥ ಘಟ್ಟಿಗ ಲಾಯ್ರಿ ನಮ್ಮ Chambersಗೆ ಬರೋವಾಗ ಯಾಕೀ ಕೋಣೆ ಇಷ್ಟು dirty ಆಗಿಧೇ"ಂತ ಗೊಣಗುಟ್‌ಕೊಂಡಾಂತಿಟ್ಕೊ. ಆಗ ಬಾಳೂ, ನೀನು ಬೆಪ್ತಕ್ಡಿ ಹಾಗೆ ನಿಲ್ಲದೆ... ಸುತ್ಮುತ್ನೋಡಿ ಕೊನೆ ಮೂಲೇಲೆ ಗೋಡೇಗೆ ಒರಗ್ಕೊಂಡಿರೊ ಪರಕೇನ ಕಸ್ಕೊಂಡು, ಜಡ್ಜಿ Chambersನ ಜಾಡ್ಸಿ ಗುಡ್ಸಿ, ಕಸದ್ ಗುಡ್ಡೇನ ಕದದ ಹಿಂದೆ ಪೇರ್ಸಿ, ಕಸ್ಪರಿಕೇನ ಇದ್ಕಡೆ ಇಟ್ಬಿಟ್ಟು, ಜಡ್ಜಿ ಪಕ್ಕಕ್ಕೆ ಬಂದು ತುಟಿ ಕದಲಸ್ದೆ ತೆಪ್ಗೆ ನಿಂತೇಂತಿಟ್ಕೊ, ಮಸ್ಲ! ಆಗ ಜಡ್ಜಿ ಮೂಗಿನ್ ಮೇಲೆ ಬೆರಳಿಟ್ಕೊಂಡು, "ಎಲಾ ನಾನು ಗೊಣಗುಟ್ಟಿದ ಮಾತ್ರಕ್ಕೇನೇವೇ ಈತ ಇಷ್ಟೆಲ್ಲ ಇಷ್ಟು ಚಟುವಟಿಕೆಯಿಂದ ಮಾಡಿರೋದ್ನ ನೋಡಿದ್ರೆ ಇಂಥಾವೊಬ್ಬ ನನ್ನ ಪಕ್ಕದಲ್ಲೇ ಇದ್ರೆ ನಾನೇ ಎಷ್ಟೆಲ್ಲ ಮಾಡ್ತಾ ಇದ್ದೆ! ಅದೂ ಎಷ್ಟ್ ನ್ನಾಗಿ ಗುಡ್ಸಿಧಾನೆ' ಕಸ ಗೂಡ್ಸೋದ್ರಲ್ಲಿ neat ಆಗಿರೋನು ತನ್ನ ಕಸಬ್ನಲ್ಲೂ neat ಆಗಿರ್ತಾನೆ. ಇವನ Chambersಊ neatಊ, tableಊ neatಊ, recordಊ paperಊ neat. Therefore ಇವನ Lawನೂ must be neatಊ!" ಅಂತ ನಿನ್ಮೇಲೆ ಖುಷಿಬಿದ್ದು, next ಯಾವ್ದಾದ್ರೂ vacancyಲಿ ಹಾಕ್ತಾನೆ! ನಿಸ್ಸಂದೇಹ! So much for ಗುಡ್ಸೋದು... ಅಡಿಗೇಂತೀಯ! ಹನ್ನೊಂದು ಘಂಟೇಗೆ ಕೋರ್ಟಿಗೆ ಬಂದ ಜಡ್ಜಿ, "I do not understand you", "you are wasting my time"... ಹೀಗೆಲ್ಲಾ ಒಂದು ಘಂಟೆವರಿಗೂ ರೇಗಿದ ಜಡ್ಜೀಗೆ ಒಂದು ತಟ್ಟೆ ಬೋಂಡ ಒಂದು ಕಪ್ ಕಾಫೀ tiffin timeಗೆ ಸೇರಿಸ್ಬಿಡು!, ಇನ್ನಧ್ಯಾಹ್ನವೆಲ್ಲಾ reverse gearಊ! "Yes, Mr. Balu!" "Quite so, Mr. Balu!" ಹೀಗೆಲ್ಲಾ ನೀನ್ ಬಾಯ್ಬಿಟ್ಟಿದ್ದೆಲ್ಲಾ ಬಂಗಾರ! ಅಡಿಗೆ ಆಯ್ತೇ...

ಇನ್ನು ನಿನಗೆ ಕೊಡಬೇಕಾದ ಬಾಕಿ ಹದಿನೈದಿಪ್ಪತ್ತ ಮುನ್ನೂರು ರೂಪಾಯೀಂತೀಯಾ. ಈ ಮುನ್ನೂರು ರೂಪಾಯಿನ್‌ಗತಿ ನಿಮ್ಮನೇಲೇನಾಗುತ್ತೆ ಗೊತ್ತೆ? ಮೂಗ್ಬಟ್ಟೊ, ಮೂಗುತಿಯೋ, ಕತ್ರಿ ಬಾವ್ಲೀನೋ, ಕಂಠೀಸರಾನೋ ಮಾಡ್ಕೊಂಡು ನಿಮ್ಮನೆ ಹೆಂಗಸ್ರು ನಲಿದಾಡೋಕೆ ನೆಪ್ಪಾಗುತ್ಯೇ ಹೊರ್ತು ನಿನಗುಪ್ಯೋಗವೇನೂ ಆಗೋದಿಲ್ಲ. ನೀನು ಕಷ್ಟಪಟ್ಟು ಸಂಪಾದ್ಸಿ ನನ್ ಕೈಪೆಟ್ಟಿಗೇಲಿ ತಯಾರಾಗಿರೊ ನಿನ್ನ ಮುನ್ನೂರು ರೂಪಾಯಿಗ್ಳು!... ನನ್ನ ಅಭಿಪ್ರಾಯ ಏನು ಅಂತೀಯ ಬಾಳು... ನಿನ್ನ ಸಂಬ್ಳಾನೆಲ್ಲಾ careful ಆಗಿ ಕೂಡಿ ಹಾಕಿ ಕೈ ಪೆಟ್ಗೇಲಿಟ್ಕೊಂಡು. ...ಲೇಹ್ಯ ಮಾಡಿಕ್ಕೊಂಡಿಧೇನೆಲ್ಲಾ Law ಅಂಬೋದ್ನ, ನನ್ನ ಮಂಡೆ ಅಂಬೋಜಾಡೀಲಿ... ಆ ಲೇಹ್ಯಾನ ಗುಳಿಗೆ ಗುಳಿಗೆಯಾಗಿ ನಿನ್ನ mental digestion... ಬುದ್ಧಿಯ ಜೀರ್ಣ ಶಕ್ತಿಗೆ ಅನುವಾಗಿ ತಿನ್ನಿಸಿ... ನಿನ್ನ called to the bar ಅಂತ ಲಾಯ್ರಿಯಾಗಿ ಮಾಡಿ... ನಿನ್ನ ದುಡ್ನಲ್ಲಿ Chambers ತೊಗೊಂಡು... ಒಂದು set of Law Books purchase ಮಾಡಿ ನಿನ್ನ proper ಆಗಿ install ಮಾಡಿ ನಿನ್ನ ಕಕ್ಷಿಗಾರರ ಕೇಸ್ನ ನೀನೇ ಕೋರ್ಟ್ನಲ್ಲಿ conduct ಮಾಡೋದ್ನ ಕಣ್ತುಂಬ ನೋಡಬೇಕೂಂಬೋ ಕೋರಿಕೇಗೆ ಅಸ್ತಿಭಾರವಾದ ಕೆಲಸಗಳ್ನ ಮಾಡಿಸ್ತ ನಿನಗೆ training ಕೊಡ್ತಿರೊ ನನ್ಮೇಲೆ ಅಪನಂಬಿಕೆಯೇ ಬಾಳು?

(ಬಾಳು ಇದನ್ನೆಲ್ಲಾ ಕೇಳಿ ಆಶ್ಚರ್ಯಪಟ್ಟು, ಪಶ್ಚಾತ್ತಾಪದಿಂದ ಉಕ್ಕಿ ಬರುವ ದುಃಖವನ್ನು ತಡೆಯಲಾರದೆ ಅಹೋಬ್ಲುವಿನ ಅಂಗೈಮೇಲೆ ಮುಖವನ್ನು ಘರ್ಷಿಸಿಕೊಳ್ಳುತ್ತ ರೋದಿಸುವನು)

ಬಾಳು! ಹೀಗೆ ಶೋಕಪಡೋದು ಅನುಚಿತ, ಅನಾರ್ಯ, ಅಸ್ವರ್ಗ, ಅಕೀರ್ತಿಕರ, ಅರ್ಜುನ... ಅಲ್ಲ ಬಾಳು! ನ್ಯಾಯಾಸ್ಥಾನಾಂಬೋ ದೇವಸ್ಥಾನದಲ್ಲಿ, Court room

ಅಂಬೋ ಗರ್ಭಗೃಹದಲ್ಲಿ, Judicial bench ಅಂಬೊ ಮಂದಾಸನದ ಪೀಠದ ಮೇಲೆ ನಿನ್ನ ಕೂಡ್ಸಿ, ಚೀಫ್ ಜಡ್ಜಿಯಾಗಿ ಪಟ್ಟಾಭಿಷೇಕ ಮಾಡ್ಸಿ, ನಿನ್ನ ಮುಖಕ್ಕೆ ಮಂಗಳಾರ್ತಿ ಎತ್ತಿ, ನಿನ್ನ ದರ್ಶ್ನ ಮಾಡಿ ಸಂತೋಷಪಡಬೇಕೂಂಬೋ ಅಭಿಪ್ರಾಯಾನ ಮುಂದಿಟ್ಕೊಂಡು ಈಗ ತಾನೇ ನಿನ್ನ ಕೈ ಹಿಡ್ಕೊಂಡು... ಆ ದೇವಸ್ಥಾನದ ಬಾಗಿಲು ತೆಗೆದು ಪ್ರಾಕಾರಾನ ಪ್ರದಕ್ಷಿಣೆ ಮಾಡಿಸ್ತಿರೊ **ನನ್ಮೇಲೆ** ಅಪನಂಬಿಕೆಯೇ ಬಾಳು!? ಮಗೂ...?

(ಬಾಳು ಹಿಡಿದುಕೊಂಡಿರುವ ಕೈ ಅಲ್ಲದ ಮತ್ತೊಂದು ಕೈಯಿಂದ ಬಾಳುವಿನ ತಲೆಯನ್ನು ವಾತ್ಸಲ್ಯದಿಂದ ಸವರುತ್ತ)

ಇನ್ನೂ ನನ್ಮೇಲೆ ಅಪನಂಜಿಕೆಯೇ ಬಾಳು?... ಹೀಗೆ ನನ್ನ ನಂಬಿ leader of local bar ಆಗಿ ಮುಂದಕ್ಕೆ ಬರ್ತೀಯಾ? ಇಲ್ಲ, ನಿನ್ನ ಹಾಳು ಮುನ್ನೂರ್ರೂಪಾಯ್ನ ನಿಮ್ಮನೆ ಹೆಂಗಸ್ರ ಪಾಲುಮಾಡಿ ಸಾಯೋವರಿಗೂ ನಿಮ್ಮನೆ ಪರಿಚಾರಕ್ನಾಗಿ ನರಳ್ತೀಯಾ?... ಇದನ್ನ ಈಗ್ಲೆ ಇತ್ಯರ್ಥ ಮಾಡ್ಕೊ, ಕಂದ!

ಬಾಳು: (ದುಃಖವನ್ನು ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳುತ್ತ) ಕ್ಷಮ್ಸಿ ಸಾರ್! ನಾನು ಮುಂದಕ್ಕೆ ಬರೋದ್ನ ನಿಮ್ಮನಸ್ನಲ್ಲಿ ಮುಂದಿಟ್ಕೊಂಡು ನನಗೆ training ಕೊಡ್ತಿರೊ ಮರ್ಮ ತಿಳಿಯದ ನನ್ಮಂಕುತನಾನ ಕ್ಷಮ್ಸಿ, ಸಾರ್! ಕಂಡೋರು ಕಾಣ್ದೋರು ನನಗೆ ಹೇಳ್ಕೊಟ್ಟದ್ದೆಲ್ಲಾ ನಂಬಿ ಹುಚ್ಚುಹುಚ್ಚಾಗಿ ನಾನು ಹರಟ್ತಿದ್ದದ್ದೆಲ್ಲಾ ಮರತ್ಬಿಡಿ, ಸಾರ್! ನಿಮ್ಮೇಲೆ ನನಗಿರೋ ನಂಬ್ಕೆ ಒಂದೆರಡು ಕ್ಷಣ ಜಾರಿದ್ದ ಮನಸ್ಸಿಗೆ ತಂದ್ಕೊಬೇಡಿ. Sir...ಕ್ಷಮ್ಸಿ Sir!... ತಪ್ಪಾಯಿತು. ಕ್ಷಮ್ಸಿ Sir.

(ಬಲವಾಗಿ ರೋದಿಸುತ್ತ ಆಹೋಬ್ಲುವಿನ ಕೈಯನ್ನು ಎದೆಗೆ ಉಜ್ಜಿಗೊಳ್ಳುತ್ತ ಪೇಚಾಡುವನು)

ಆಹೋಬ್ಲು: (ಬಾಳುವಿನ ಗಲ್ಲವನ್ನು ಹಿಡಿದು ಮುಖವನ್ನು ಮೇಲಕ್ಕೆತ್ತಿ ಮಧುರ ವಚನಗಳಿಂದ) ಬಾಳು, ನನ್ಮೇಲಿನ ನಂಬ್ಕೆ ನಿಮಿಷ ಮಾತ್ರ ಮರೆತ ನಿನ್ನ ತಪ್ಪು ಕ್ಷಮ್ಸೋಕೆ ನಾನು ಯಾರು? ಮಗು. ಪಸುಳೆ, ಪಶು ಕಂದ ಅಂತಾರಲ್ಲ ಅಂಥ ಶಿಶುವಾದ ನಿನ್ನ ಹೀಗೆ ಬಿಕ್ಕಿಬಿಕ್ಕಿ ಅಳೋ ಸ್ಥಿತೀಗೆ ತಂದ ನನ್ನ ತಪ್ಪು ಕ್ಷಮ್ಸೋಕೆ ನೀನು ಯಾರು? ಯಾರು ಯಾರಿಗೆ ಹೊಣೆ? ಇದು ಎರವಿನ್ ಸಂಸಾರ! ನಿನ್ನ ತಪ್ಪಾಗ್ಲೀ ನನ್ನ ತಪಾಗ್ಲೀ ಎಲ್ಲರ್ ತಪ್ಪನ್ನೂ ಕ್ಷಮ್ಸಿ ಕಾಪಾಡೋಕೆ ಪರಮಾತ್ಮನೊಬ್ಬನಿಧಾನೆ ಅಂಬೋದ್ನ ಮರೀದೆ ಆತನ ಮೇಲೆ ಭಾರಹಾಕಿ ನಾವಿಬ್ರೂ... ಮುಂದಿನ್ಕಾರ್ಯ ಮಾಡೋದಲ್ವೇ... ಉಚಿತ!

ಬಾಳು: ಹು, Sir. ನೀವು ಹ್ಯಾಗೆ ಹೇಳ್ತೀರೋ ಹಾಗೇ ಸಾರ್.

ಅಹೋಬ್ಲು: ಹಾಗಾದ್ರೆ... ಇರ್ಲಿ. ಈಗ ಹೇಗಿದೆ ಮೈ... ಮನಸ್ಸು... ಇತ್ಯಾದಿ?... ಬೇಕಾದ್ರೆ ಸ್ವಲ್ಪ ಕೂತ್ಕೊಂಡು ಸುಧಾರ್ಸ್ಕೊ ಮಗು... ಸುಧಾರ್ಸ್ಕೊ!

ಬಾಳು: ಪರವಾಯಿಲ್ಲ, ಸಾರ್, ತಕ್ಕಮಟ್ಟಿಗಿದೆ... ಮೈಯಿ... ಮನಸ್ಸು...

ಅಹೋಬ್ಲು: ಒಟ್ನಲ್ಲಿ failrly strong... ಅನ್ನು... ಊಂ?

ಬಾಳು: ಊಂ, ಸಾರ್.

ಅಹೋಬ್ಲು: ಹಾಗಾದ್ರೆ... ಎರಡೂವರೆ ತೊಲ ಎತ್ತಿದ್ರೆ ಆಯಾಸ್ವಿಲ್ವಲ್ಲಾ ನಿನಗೆ?

ಬಾಳು: ಎಲ್ಬಂತೂ ಸಾರ್!

ಅಹೋಬ್ಳು: Goodಆ. ರಾಮ್ಮೈಟ್ರಂಗ್ದೀಗೆ ಹೋಗಿ ಎರಡೂವರೆ ತೊಲ ನೆಶ್ಯ ತಂದ್ಬಿಡು, ಮಗು. ಯಾವಾಗಿನ ಹಾಗೆ ನೀನೇ ದುಡ್ಕೊಡಬೇಡ... ಅವನ ಕೇಸ್ ಹೀರಿಂಗು ನಾಳೆ ಅಂತೆ... ಬೇಗ ಬಾ, ಮಗು. ಬೀದೀಲಿ ಹುಷಾರು... ಬಸ್ಸುಗ್ಳು... ಜಟ್ಕಾಗ್ಳು... ಭದ್ರವಾಗಿ ಬಂದು ಸೇರು.

(ಬಾಳು ನಿಷ್ಕ್ರಮಣ ಎಡಬಾಗಿಲಿಂದ)

(ಸ್ವಗತಂ)

ಬದುಕಿದೆ!... As I have always maintained... ಎಂಥ ತಕ್ರಾರುಗ್ಳು ಬಂದ್ರೂ lifeನಲ್ಲಿ... ಸ್ವಲ್ಪ tactics... diplomacyಗಾನ use ಮಾಡಿದ್ರೆ ಸರ್ವವೂ ಸರಿಹೋಗುತ್ತೆ... ಹೌದು... ಕಾಫೀಗೇನ್ ತಡ?

ಜೀವು: (ಹಿಂದಿನ ಬಾಗಿಲಿನಿಂದ ಒಂದು ಚೊಂಬಿನಲ್ಲಿ ಕಾಫಿಯನ್ನೂ ಲೋಟಾವನ್ನೂ ತಂದು ಮೇಜಿನ ಮೇಲಿಟ್ಟು) ಕಾಫಿ ಆಹೋಽದದ್ ನನ್‌ತಪ್ಪಲ್ಲ!

ಅಹೋಬ್ಳು: ಇದೇನ್ ಜೀವು, ಹೀಗ್ಹೇಳ್ತೀಯ? ಹೀಗ್ಬಾ. (ಜೀವು ಸಮೀಪಿಸುತ್ತಲೂ ತಾನು ಕೂತಿದ್ದ ನೆಲವನ್ನು ತಾನು ಹೇಳುವ ವಚನಗಳಿಗೆ ಉದಾಹರಣೆಯಾಗಿ ಉಪಯೋಗಿಸುತ್ತ) ಕ್ಷೀರಸಾಗರ, ಜೀವು! ಇತ್ಕಡೆ ಸುರರು, ಅತ್ಕಡೆ ಅಸುರರು... ಮಂದರಪರ್ವತಕ್ಕೆ ಆದಿಶೇಷನ್ನ ಸುತ್ತಿ ಕಡೀತಿಧಾರೆ... ಎತ್ಕೋತ ಎದ್ಬಂತು ಕಾಲಕೂಟ ವಿಷ! ಅದನ್ನು ಆ ಕೈಲಾಸಪತಿ ನುಂಗಿ... ಶ್ರೀಕಂಠ... ಸಿತಕಂಠ... ನೀಲಕಂಠನಾಗತ್ಲೂವೆ... ಕಡೆಯೋದ್ನ continue ಮಾಡ್ತಾ... ಅಮೃತ ಉಕ್ತಿಧೆ... ಅದ್ನೆಲ್ಲಾ ಸುರರು ಈ ದಡಕ್ಕೆ ಎಳ್ಕೊಂಡು... ಇಂದ್ರ ಮೇಘನಾದ... ಎಲೆ ಹಾಕ್ರೋ ಅಂತ

ಕಿರಲ್‌ದ... ಇನ್ನು ಹಾಕಿದ ಒಂದೊಂದೆಲೇ ಮುಂದೆ ಒಬ್ಬೊಬ್ಬಮರ. **ಅಮರ**ನೇನು... ಆಗ ಇನ್ನೂ **ಮರ**. ಅಮೃತಾನ ಗದುಕಿದ್ಮೇಲೇನೇವೇಯೇ **ಅಮರ** ಆದದ್ದು. ಇನ್ನಡಿಸೋಕೆ ವಿಷ್ಣು, ಮೋಹಿನಿ ಅವತಾರ, ಜೀವು! ಮೋಹಿನಿ ವಿಷ್ಣು! ಹೀಗೆ ಜೀವೂ, ಬಡಿಸಿದ ಪದಾರ್ಥ ಅಮೃತ! ಬಡಿಸೋದ್ ಮೋಹಿನಿ! ಇದ್ದ ಬಕಾಸುರನ ಹಾಗೆ ಭಕ್ಷಿಸೋದ್ ಬಿಟ್ಬಿಟ್ಟು "ಅಮೃತ ಆರಿಹೋಗಿದೇ!"ಂತ ಬಡುಕೊಂಡ್ರೆ ದೇವತೆಗ್ಳು? ಕಾಫಿ ಆರಿದ್ರೇನು! ಹೇಗಿದ್ರೇನು! (ಜೀವುವಿನ ಹಸ್ತವನ್ನು ಹಿಸುಕುತ್ತ) ನಮ್ಮ ಜೀವು ಮುಟ್ಟಿದೆಲ್ಲಾ ಜೀವಾಮೃತ ನನಗೆ!

ಜೀವು: (ತನ್ನ ಕೈಯನ್ನು ಹಿಡಿದ ಅಹೋಬ್ಲುವಿನ ಕೈಯನ್ನು ಒದರಿ) ಸಾಕ್ಷಿಲ್ಸೀ ಅಂದ್ರೆ ನಿಮ್ಸಿಲೀಟ್ ಮಾತುಗ್ಳು! ಆರಿದ್ ಕಾಪಿ ಇರ್ಲಿ...

ಅಹೋಬ್ಲು: (ಬೆಚ್ಚಿಬಿದ್ದು) **ಹಾಗೇ ಇರು ಜೀವು! ಕದಲಿಸ್ಬೇಡ ಮುಖಾನ!...** ರಾಧಾ!?... ಅಲ್ಲ ಇಷ್ಟುದೊಡ್ಡ ಕಣ್ಣಿಲ್ಲ. ಊರ್ವಸೀ? Not at all! ಇಷ್ಟು ಚಿಕ್ಕ ಬಾಯಿಲ್ಲ! ಮೋಹಿನೀ?... Never! ಕೂದ್ಲು ಉಯ್ಯಾಲೆ ಆಡ್ತ ಎಷ್ಟು ಬೀಸಿದ್ರೂನೂವೆ... ತಿಲೋತ್ತಮಾ?... perhaps...(ಕೈಬೆರಳುಗಳಿಂದ ಥಟ್ಟನೆ ಜೀವುವಿನ ಕೆನ್ನೆಯನ್ನು ಸವರುತ್ತಾ) ದಮ್ಮಯ್ಯ ಜೀವು, ದಯವಿಟ್ಟು ಕಾಫೀನ ಬಿಸಿ ಮಾಡ್ಕೊಂಬಂದ್ಬ್ಯೋ ಬದಕ್ದೆ. ಒಲೇ ಉರೀತಿದೆ ತಾನೇ?

ಜೀವು: ಕಾಫಿ ಮಾಡಿದ್ದು ಒಲೇಲಲ್ಲ, stoveನಲ್ಲಿ.

ಅಹೋಬ್ಲು: ಯಾಕೆ?

ಜೀವು: ಯಾಕೇನು? ಒಲೇಗ್ ಸೌದೆಯಿಲ್ಲ.

ಅಹೋಬ್ಳು: ಮೊನ್ನೆ ಮೊನ್ನೆ ಅಲ್ವೇ ಒಂದು ಗಾಡಿ ಕಟ್ಟೆ...?

ಜೀವು: ಕಟ್ಗೆ ಕಟ್ಗೇನೇ, ಏನು ಉಪಯೋಗ? ಅದನ್ ಒಡೆದರೆ ತಾನೇ ಒಲೇಗೆ ಉಪಯೋಗ. ನೀವೋ ನಿಸ್ತ್ರಾಣಿ. ಇನ್ನು ನಿಮ್ ಗುಮಾಸ್ತೇನೊ ಗೊಂಡ್ನಲ್ಲಿ ಜೋಡಿಸ್ದ ಹಂಚಿ ಕಡ್ಡಿ. ಇನ್ಯಾರು ಮನೇಲಿ? ನಾನೊಬ್ಬು. ಆ ಸೊಂಟ ಮುರ್ದ ಸಿವಂಗಿ... ಬೋರ! (ತನ್ನ ಹೆಸ್ರು ಕೇಳಿಬರುತ್ಲೂವೆ ಬೋರನು ಹಿಂಬಾಗಿಲಿನಿಂದ ಪ್ರವೇಶಿಸುವನು) ನನಗೋ ನೆನ್ನೆಯೆಲ್ಲಾ ಲಾಲ್ಬಾಗಿಗೆ ನಡ್ದೂ ನಡ್ದೂ ಮೈಯೆಲ್ಲಾ ನೋವು. ಏನ್ಲಾಯ್ರಿ ಕೆಲ್ಸಾನೊ ನೀವು ಮಾಡೋದು! ಒಂದು ಕುದುರೆ ಗಾಡೀಗೆ ಯೋಗ್ಯತೆಯಿಲ್ಲ!

ಅಹೋಬ್ಳು: ನಾನೇನ್ಮಾಡೋದು, ಜೀವು! ಗಾಡಿಗ್ದುಡ್ಡಿತ್ತೋ ಕುದುರೇಗಿಲ್ಲ. ಕುದುರೇಗ್ ದುಡ್ಡಿತ್ತೋ ಗಾಡೀಗಿಲ್ಲ. ಎರಡ್ನೂ ಕೊಂಡ್ಕೋಳ್ಳೋಕೆ ಕೂಡ್ಹಾಕಿದ್ರೋ ದುಡ್ನ... ಸಾಮಾನುಗಳಿಗೆ ದುಡ್ಡಿಲ್ಲ. (ಬೋರನನ್ನು ಕ್ಷಣಮಾತ್ರ ದುರುಗುಟ್ಟಿ ದರ್ಶಿಸಿ... ಮುಖದಲ್ಲಿ ಜ್ಞಾನೋದಯವನ್ನು ವ್ಯಕ್ತಿಸುತ್ತಾ) ಒಂದ್ಯೋಚ್ನೆ ಜೀವು! ಪುಟ್ದೊಂದು ಗಾಡೀನೂ ಸಾಮಾನ್ನೂ ಸಂಪಾದಿಸ್ಕೊಡ್ತೇನೆ... ನಿನಗೆ ಬೇಕಾದಾಗೆಲ್ಲಾ ಈ (ಬೋರನನ್ನು ಸೂಚಿಸುತ್ತ) ಚತುಷ್ಪಾದಾನ harness ಮಾಡ್ಕೊಂಡು drive ಮಾಡು.

ಬೋರ: (ಸ್ವಗತಂ) ಸಿಕ್ತು! ನಮ್ಮ ಒಂಸಕ್ಕೆ ಒಸ್ಕಸ್ಬು! ನಾನೊಬ್ನೇ ಯಾಕೆ, ನಮ್ಮ ಅಣ್ಣನ್ನೂ ಕರ್ತರ್ತೀನಿ... ಇಬ್ಬನ್ರೂ ಕಟ್ಕೊಂಡು ಒಡೀರಿ ಜೋಡಿ ಕುದ್ರೇ ಸಾರಾಟ್ನ...

(ಬಲಬಾಗಿಲಿನಿಂದ ನಿಷ್ಕ್ರಮಣ)

ಅಹೋಬ್ಳು: Joking ಇರ್ಲಿ ಜೀವು. ಕಡ್ಲೆಹಿಟ್ಟಿದೆ, ಬಾಳೆ ಕಾಯೋ ಬದ್ನೆಕಾಯೋ ಇದೆ. ಒಂದ್ತಟ್ಟೆ ಬೋಂಡ ಮಾಡಿ ತಂದ್ಬಿಡು stoveನಲ್ಲೆ, ಬಿಸಿ ಬಿಸಿ ಕಾಫಿ plus ಬೋಂಡ... ಇನ್ನು ಆರು ತಿಂಗಳ್ಗೆ ಬೇಕಾದಷ್ಟು ಸೌದೆ ಒಡೆದ್ಹಾಕ್ತೇನೆ.

(ನಿಟ್ಟುಸಿರು ಬಿಡುತ್ತಾ ಜೀವೂ ಹಿಂಬಾಗಿಲಿನಿಂದ ನಿಷ್ಕ್ರಮಿಸುವಳು)

ಏನಿದು! ನಾನೇ ಮನೇಗೆ ಸೌದೆ ಒಡ್ಯೋ ಸ್ಥಿತೀಗೆ ಬಂದ್ಬಿಟ್ಟಿದೆಯಲ್ಲ ನನ್ನ ಸಂಸಾರ! Still ಆಪತ್ಕಾಲೆ ನಾಸ್ತಿ ಮರ್ಯಾದೆ! Man ಆಗ್ಬುಟ್ಟಿದ್ಮೇಲೆ ಮಿಕ್ಕವರಿಲ್ದಾಗ Myselfಏ ರಾಜ, Moustacheಏ ಮಂತ್ರಿ! ಕೈಯಿ ಕಾಲೇ Infantry, Cavalry! But... ಬೋಂಡಾನೂ ಕಾಫೀನೂ ಬರ್ಲಿ! ಏನೋ ಇದುವರ್ಗೂ ನನ್ಕೈಬಿಡ್ದೆ ನನ್ನ ಜೀವ ನನ್ನ ಜೀವು ಸಮೇತ ಜರುಗಿಸ್ತಿರೋ ಜಗದೀಶ ಈಗ ಹಿಂಜರಿದ್ನೋ ಅವನಿಗ: ಅಪಯಶಸ್ಸು... ಅಪಮಾನ!

(ಬೀದಿ ಬಾಗಿಲು ತಟ್ಟುವ ಸದ್ದನ್ನು ಕೇಳಿ) ಯಾರದು? ಬನ್ನಿ ಒಳಗೆ!

ಕೆಂಪೇಗೌಡ: (ಪ್ರವೇಶಿಸಿ... ಬಾಗಿ) ಕೈ ಮುಗ್ದೆ ಬುದ್ದಿ, ತಕೊಳ್ಳಿ, ಕಟ್ನಾವ (ಕಟ್ಟನ್ನು ಮೇಜಿನ ಮೇಲಿಡುವನು)

ಅಹೋಬ್ಳು: ಏನು, Caseಏ?

ಕೆಂಪೇಗೌಡ: ಊಂ ನಿಂಪಾದ. Case ಅಲ್ದೆ ಲಾಯ್ರಿ ಮನೆಗೆ ನಾನ್ಯಾಕೆ ಬರ್ಲಿ ನಿಮ್ಮೇಗೆ ನನ್ನೊಡೆಯಾ! ದೊಡ್ಡಟ್ಟಿ ನಿಂಗಪ್ಪಣ್ಣ ಯೆಂಗಾದ್ರೂ ಕೋರ್ಟ್ಗೆಳ್ದು ನಮ್ಮಯ್ಯನ್ಕಾಲ್ದಲ್ಲಿ ಅವರಯ್ಯ ಕಸ್ಕೊಂಡ ಒಲ ತಿರುಗಿ ನನ್ಕೈಗೆ ಬರೋಗಂಟ... ಏನ್ಮುದ್ದಾನೆ ಕರ್ಚಾಗ್ಲಿ...

ಅಹೋಬ್ಳು: ಇದೆಲ್ಲಾ ಇರ್ಲಿ... ಏನ್ Caseಉ?... ಕೇಳೋದೇನು, ಕಟ್ನಲ್ಲೇ ಕಂಡುಬರುತ್ತೆ... (ಕಟ್ಟನ್ನು ಬಿಚ್ಚಲು ಉಪಕ್ರಮಿಸುವನು)

ಕೆಂಪೇಗೌಡ: ಅಲ್ಲೇನು ನೋಡೋದು ಬುದ್ದಿ! ಎದ್ರು ಮನೆ ಲಾಯ್ರಿ ಕಟ್ನೆಲ್ಲಾ ಒಂದ್ಕಾಗ್ಜ ಬುಡ್ದೆ ಮೊದ್ಲಿಂದ ಕೊನೇತಂಕ ಸುಲೋಚ್ನ ಸಿಕ್ಕಿಸ್ಕೊಂಡು. ...ಓದಿ... (ಮೇಜಿನ ಮೇಲಿರುವ Law ಪುಸ್ತಕಗಳನ್ನು ಸೂಚಿಸಿ) ಇದ್ಯಾವ್ಕೂ ಲೆ...! ಇವುಗ್ಳಪ್ಪಂದ್ರಂಗೆ... ದೊಣ್ಣೆ ದೊಣ್ಣೆ ಪುಸ್ತಕಗಳ್ನ ನೋಡಿ ಓದ್ಕೊಂಡು, "ಈ Caseಉ ಎಂಥ ಬೆಪ್ಪ ಲಾಯ್ರಿ ಕೈಲಿ ಸಿಕ್ಕಿದ್ರೂ ಸೋಲೋ ಅಂಗಿಲ್ಲಾ!" ಅಂದ ಬುದ್ಧಿ... ಎದ್ರು ಮನೆ ಅವಯ್ಯ... ಲಾಯ್ರಿ... ನಿಮ್ಮಂಗೆ 'ಬೋಲ್ಡ್' ಆಕ್ಕೊಂಡೌನೆ ಮನೆ ಮುಂದೆ.

ಅಹೋಬ್ಳು: ಅಲ್ಲಯ್ಯಾ, ಎದ್ರುಮನೆ ಲಾಯ್ರಿ ಕಟ್ನೆಲ್ಲಾ ಓದಿ ಬೆಪ್ಪಕ್ಕೀನೂ ಸೋಲೋಹಾಗಿಲ್ಲ ಅಂದದ್ನ ಪರೀಕ್ಷಿಸೋಕೆ ಅವನ್ಬಿಟ್ಟು ನನ್ನ ಹತ್ರ ತಂದಿದ್ದೀಯಾ?

ಕೆಂಪೇಗೌಡ: ಅಲ್ಲ ಬುದ್ದಿ; ಅತ್ನಿಮಿಷ್ದಲ್ಲಿ ಗೆಲ್ಲೊ ಮೊಕದ್ದಮೇಗೆ ಐನೂರು ರೂಪಾಯಿ ಕೇಳ್ತಾನಲ್ಲಾ...! ಇನ್ಬಡವ್ರ ಪಾಡೆಂಗೆ? ಅಲ್ದೆ ಅವಯ್ಯನೆ ಜೀವ್ನ ತಾನೆ ಎಂಗೆ?

ಅಹೋಬ್ಳು: ಹಾಗಾದ್ರೆ ಆತ ದುಡ್ಕೇಳಿದ್ದಪ್ಪು, ನಾನು ದುಡ್ಡಿಲ್ದೆ ದುಡ್ಯೋ ಬೆಪ್ಪೂಂತ ತೀರ್ಮಾನಿಸ್ಕೊಂಡೇ ಬಂದದ್ದು ನೀನು?

ಕೆಂಪೇಗೌಡ: ಅಂಗಲ್ಲ ನನ್ನೊಡ್ಯಾ. ಲೆಕ್ಕ ಲೆಕ್ಕಾನೇವೆ! ನಾಯ ನಾಯಾನೇವೇಯೇ! ನಾಯವಾಗಿ... ಲೆಕ್ಕಾಚಾರದ್ಮೇಲೆ ದುಡ್ತಕ್ಕೊಳ್ಳೋದ್ನ ಬುಟ್ಬುಟ್ಟು ಬಡವರ್ನ ಸಾವ್ರಾಂತ ಬೆದರ್ಸೋದು ನಾಯಾನಾ ನಿಂಪಾದ?

ಆಹೋಬ್ಳು: ಅಲ್ಲ, ನ್ಯಾಯವಲ್ಲ. ಬಡಬಗ್ಗರಿಗೆ ಸಹಾಯ ಮಾಡೋಕೇಂತ ಇರೋ ಲಾಯ್ರು... ಇದೆಲ್ಲಾ ಯಾಕೆ?... ಇಲ್ಬಾ... (ವಕಾಲತ್ ಕಾಗದದ ಮೇಲೆ ಮಶಿಯಲ್ಲಿ ಅದ್ದಿದ ಪೇನಾವನ್ನು ಓಡಿಸುತ್ತ...)ಹೆಸ್ರೇನಯ್ಯಾ?

ಕೆಂಪೇಗೌಡ: ಕೆಂಪೇಗೌಡ ನನ್ನೊಡ್ಯಾ. ತಾವ್ರೆಕೆರೆ ದೊಡ್ಡಟ್ಟಿ ಬೋರೇಗೌಡ್ನ ದೊಡ್ಮಗ ಕೆಂಪೇಗೌಡ.

ಅಹೋಬ್ಳು: (ಬರೆದು) ಇಲ್ಬಾ... ಬರಿಯೋಕ್ ಬರುತ್ಯೇ... ಹೆಸ್ರು?

ಕೆಂಪೇಗೌಡ: ಯೆಬ್ಬೆಟ್ಟ್ ಇರೋಗಂಟ ಬರವಣಿಗೆ ಯಾಕ್ಬುದ್ದಿ? (ಮಶಿಕುಡಿಕೆಯ ಬಾಯಿಗೆ ಎಡಗೈ ಹೆಬ್ಬೆಟ್ಟನ್ನು ಇಟ್ಟು ಕುಡಿಕೆಯನ್ನು ಕುಲುಕಿ ಹೆಬ್ಬೆಟ್ಟನ್ನು ಲಾಯ್ರಿ ತೋರಿಸಿದ ಕಡೆ ಒತ್ತುವನು)

ಅಹೋಬ್ಳು: ಹೌದೂ... ಎಷ್ಟ್ರೂಪಾಯಿನ್ಬಾಬ್ತು...? ಕೇಳೋದೇನು...(ಎನ್ನುತ್ತಾ ಕಟ್ಟನ್ನು ಬಿಚ್ಚಲುಪಕ್ರಮಿಸುವನು)

ಕೆಂಪೇಗೌಡ: ಅಲ್ನೋಡೋದೇನ್ಬುದ್ದಿ? ನಾನೇ ಯೇಳ್ತೀವ್ನಿ... ಐನೂರ್ ರೂಪಾಯಿನ್ತಕ್ರಾರು... ಅಲ್ನೋಡೋದೇನು?

ಅಹೋಬ್ಳು: ಹಾಗಾದ್ರೆ... ಸಧ್ಯ... ಒಂದರವತ್ತು ರೂಪಾಯಿ ಇಲ್ಲಿಟ್ಬಿಟ್ಟು

ಕೆಂಪೇಗೌಡ: (ಕೈಮುಗಿದು) ದಮ್ಮಯ್ಯ ಬುದ್ದಿ. ದೇವ್ರೂ ನೀವೇ... ದಿಂಡ್ರೂ ನೀವೇ... ನನ್ಮಟ್ಟೀಗೆ ದೇವ್ರೇ ನನ್ನೆಜ್ಜೇನ ತಿರುಗ್ಸಿಬರ್ೇಕು. ನಿಮ್ಮನೆ ಕಡ. ಒಂದೇ ಮಾತು ನಂದು.

“ಟಾಂಪ್” ದುಡ್ನ ನಾಳೆ ತಂದ್ಬಿಡ್ತೀವ್ನಿ ಮಿಕ್ಕರ್ಚೆಲ್ಲಾ ಎಂಗಾದ್ರೂ ನೀವೇ ಸರ್ಮಾಡಡ್ಕೊಂಡು ಮೊಕದ್ದಮೇನ ಗೆದ್ದು ಬಂದ ದುಡ್ಗೆ... ನಿಮ್ಮ ಕುಶಿ ಎಂಗೊ ಅಂಗೆ.

ಅಹೋಬ್ಳು: (ಸ್ವಗತಂ) ದೇವ್ರೇ ಗತ ಯಥಾಪ್ರಕಾರ ನನ್ನ ಹಣೇಬರಹ! ನನಗ್ಬರೋ ಫೀಸೆಲ್ಲಾ conditional upon my successಉ, which again is always problematicಉ! ಈಗ...

ಕೆಂಪೇಗೌಡ: ಬುದ್ಧಿ, ಊರು ಸುತ್ಕೊಂಬರ್ತಿನೀ. ನೆಂಟ್ರೌರೆ. ಆದ್ರೆ ಬುದ್ಧಿ, ರಾತ್ರಿ ಮನಿಕ್ಕೊಳ್ಳಾಕೆ ಒಸಿ ಜಾಗ ಕೊಡಬೇಕ್ರ ಜಗ್ಗಿ ಮೇಲೆ. ಇಳ್ಳು ಬಿದ್ಕೊಂಡು ಬೈಸಾರಿ ಅಳ್ಳಿ ಕಡೆ ಕಾಲಾಕ್ತೀನ್ರ.

ಅಹೋಬ್ಳು: (ಕಟ್ನನ್ನು ಮೇಜಿನ drawerಗೆ ಸೇರಿಸಿ, ಆತ್ಮಗತಂ) ಈಗೇನ್ಮಾಡೋದು? ಮುನ್ಸಿಫ್ ಕೋರ್ಟು at least ನಾಲ್ಕು adjournmentಉ, ಒಂದು ಹೀರಿಂಗು... ಇಪ್ಪತ್ತೈದು. Sub Courtಉ District Courtಉ...ditto... ಇಪ್ಪತ್ತೈದ್ನಾಕ್ಲ ನೂರು... ಮನುಷ್ಯ ತಕ್ಕಮಟ್ಗೆ ಗಟ್ಟಿಮುಟ್ಟಿ, ದಿನಕ್ಕೆ ಎಂಟಾಣೆ... ತಿಂಗಳಿಗೆ ಹದಿನೈದು, ಹದಿನೈದಾರ್ಲ ತೊಂಬತ್ತು... ಹತ್ರೂಪಾಯಿ ಹೋಗ್ಲಿ... ಇವನ ಹಳ್ಳಿಯಿಂದ ತರಕಾರಿ ಬಾಳೆಎಲೇಲಿ make-up ಆಗುತ್ತೆ... caseಉ ಗೆದ್ದು ಬರಬಹುದಾದ ದುಡ್ನ ಕೆಲಸ್ದಲ್ಲಿ ಈಗ್ಲೇ ಕೀಳೋದು diplomacy. (ಪ್ರಕಾಶಂ) ಅಪ್ಪಾ ಗೌಡ, ಒಂದು ಮಾತು. ಈ Caseಉ ಗೆದ್ದು ಕೊಡೋಕೆ ಇನ್ನು ಎರಡು ತಿಂಗಳಾದ್ರು ಆಗುತ್ತೆ... ಸರಾಸರಿ ಹೀರಿಂಗ್ಮೇಲೆ ಹೀರಿಂಗು... ಸಾಕ್ಷಿಗ್ಳು...

ಕೆಂಪೇಗೌಡ: ಅಲ್ಲವ್ರಾ!

ಅಹೋಬ್ಳು: ಅಷ್ಟ್ರವರ್ಗೂ ನಾನು ಬದುಕಿರ್ಬೇಡ್ವೇ?

ಕೆಂಪೇಗೌಡ: ಇದೇನುಚ್ಚು ಬುದ್ದಿ? ಬದಕ್ದೆಯೇನು... ನಿಮ್ಮಂತಾವ್ರು?

ಅಹೋಬ್ಳು: ದಿನಾ ಬದುಕಿರೋಕೆ ಅನ್ನ ಬೇಕು. ಅಕ್ಕಿ ಇದೆ ಮನೇಲಿ. ತರ್ಕಾರಿ ಇದೆ. ದಿನಸುಗಳು ಇವೆ. ಆದ್ರೆ ಕೆಂಪಣ್ಣ... ಈ ಮನೆ ಕಟ್ಟೋನು... ಅಡಿಗೆ ಮನೇಲಿ ಒಲೆ ಹಾಕ್ದಾಗ... ಒಲೆ ಬಾಯಿ ಚಿಕ್ಕದಾಗಿದೆ. ನಾನು ಕೊಂಡ್ಕೊಂಡ ಗಾಡಿ ಸೌದೇನೋ ದೊಡ್ಡ ಕಟ್ಟಿಗೆಗ್ಳು. ಇದಕ್ಕೇನ್ ಉಪಾಯ?

ಕೆಂಪೇಗೌಡ: ಉಪಾಯವೇನು ಬುದ್ದಿ? ಕಟ್ಗೇನ ಚಿಕ್ಕಚಿಕ್ಕದಾಗಿ ಸೀಳೋದೇ ಉಪಾಯ!

ಅಹೋಬ್ಳು: ಉಪಾಯ ಒಂದೇ ಅಲ್ಲ... ಉಪಕಾರ. ನಿನ್ನಿಂದ ಆಗಬೇಕಾದ ಉಪಕಾರ.

ಕೆಂಪೇಗೌಡ: (ರೇಗಿ) ಇದೇನ್ನಾಯಾ ಬುದ್ದಿ! Caseಗೆ ಕಟ್ಟಂದೋನ್ಕೈಲಿ ಕಟ್ಗೆ ಒಡಿಸ್ಕೊಂಡು ಕೂಲಿ ಕೆಲ್ಸ ಮಾಡಿಸ್ಕೊಳ್ಳಾದಾ ನಿಮ್ಗೆಕ್ಕಾಚಾರಾ! ಕೊಡಿ ಬುದ್ದಿ ಕಟ್ನ: ನೀವಿಲ್ಲೆ ಇದ್ರೆ ಏಟೋ ಲಾಯ್ರು!

ಅಹೋಬ್ಳು: ಹಾಗಾದ್ರೆ ಈ ಕಟ್ಬಿಡಿಸ್ಕೊಳ್ಳೋಕೆ ಒಬ್ಬ ಲಾಯರ್ನಿಟ್ಟು ಬಿಡಿಸ್ಕೊ. ಯಾರ್ಹತ್ರ? ಲಾಯ್ರಿ ಹತ್ತರ್ಲೆ ನಿನ್ನ ಹಳ್ಳಿ ಮಾರನ್ ಚಾಲಕ್ಕು?

ಕೆಂಪೇಗೌಡ: (ಸ್ವಗತಂ) ಒಳ್ಳೆ ಕಾಟಕ್ತಗಲ್ಕೊಂಡ್ನಲ್ಲಾ! ಆದ್ರೇನ್ ಮಾಡೋದು! ಸಿವ ಕೊಟ್ಟದ್ದೆಲ್ಲಾ ಪರ್ಸಾದ! (ಪ್ರಕಾಶಂ) ಸರಿ ಬುದ್ದಿ. ನೀವೇಂಗೇಳಿದ್ರೆ ಅಂಗೆ. ಆದ್ರೇನು... ಬರೀ ಕೈಲಾ ಸೀಳೋದು ಸೌದೇನ?

ಅಹೋಬ್ಳು: ಛೇ ! ಕೊಡ್ಲಿಯಿಧೆ! (ಘಟ್ಟಿಯಾಗಿ) ಬೋರಾ!

(ಬೋರನು ಬರುವನು)

ಈತನ್ನ ಕರ್ಕೊಂಡ್ಹೋಗಿ ಕೊಡ್ಲಿಕೊಟ್ಟು ಸೌದೇನ ಒಡ್ಸು. ಪಕ್ಕದಲ್ ನಿಲ್ಬೇಡ. ನಿನ್ನಾಕಾರಾನ ನೋಡಿ ಮೈಮರೆತು ಕುರೀ ಅಂಬೋ ಭ್ರಮೇಲಿ ಕಾಳಮ್ಮನ್ಗೆ ಬಲಿಗಿಲಿ ಕೊಟ್ಬಿಟ್ಟಾನೂ!

(ಕೆಂಪೇಗೌಡನೂ ಬೋರನೂ ಬಲಬಾಗಿಲಿನಿಂದ ನಿಷ್ಕ್ರಮಣ)

(ಹಿಗ್ಗುತ್ತಾ) Diplomacy plus ದೇವರ ಮೇಲೆ ನಂಬ್ಕೆ ಇರೋವರ್ಗೂ ಭಯವಿಲ್ಲ. After all honestyಬೋದು best policyಗೆ ಹೆಸ್ರು...

(ಜೀದಿಯ ಬಾಗಿಲನ್ನು ತೆಗೆದುಕೊಂಡು ಪ್ರವೇಶಿಸಿ ನಶ್ಯದ ಪೊಟ್ಟಣವನ್ನು ಮೇಜಿನ ಮೇಲಿಟ್ಟು ತಲೆಬಾಗಿ ನಿಂತಿರುವ ಬಾಳುವಿಗೆ)

Thank you, Balu, Desk ಮುಂದೆ ಕೂತ್ಕೊಂಡು ಈ... (ಕಾಗದ ಒಂದನ್ನು ಬಾಳುವಿನ ಕೈಗೆ ಕೊಟ್ಟು) Statementನ copy ಮಾಡು Neat ಆಗಿ... ಎರಡು copy.

ಬಾಳು: ಆಗ್ಲಿ ಸಾರ್.

(ಕಾಗದವನ್ನು ತೆಗೆದುಕೊಂಡು ರಂಗಸ್ಥಳದ ಬಲಮುಂಭಾಗದಲ್ಲಿನ deskನ ಮುಂದೆ

ಕುಳಿತು ನಾಲಿಗೆಯನ್ನು ಬಾಯಿಂದ ಹೊರಗೆ ನೀಡಿಕೊಂಡು ಬರೆಯುತ್ತಿರುವನು. ಅಹೋಬ್ಲು ಮೇಜಿನ ಮುಂದೆ ಕುಳಿತು ಓದುವನು.)

(ಹಿಂಬಾಗಿಲಿನ ವಾಸ್ಕಾಲಿಗೆ ಸರಿಯಾಗಿ ಕೆಂಪು ribbon ಕಟ್ಟಿದ ಜಡೆಯಿಂದ ಅಲಂಕರಿಸಲ್ಪಟ್ಟು ಕಸ್ತೂರಿಯನ್ನು ಸೋಲಿಸುವ ಪ್ರಭೆಯನ್ನು ಬೀರುವ ಪುತ್ರಕನ ತಲೆಗೆ ಕರೀಟೋಪಿಯನ್ನು ಇಟ್ಟು ಜೀವು ಹಣೆಗೆ ಸಾದನ್ನಿಡುತ್ತಿರುವಳು.)

ಅಹೋಬ್ಳು: (ಬೆಚ್ಚಿಬಿದ್ದು ಎದ್ದು ಸುತ್ತಮುತ್ತೂ ನೋಡಿ) ಇದೇನಿದು... ಸೂರ್ಯಗ್ರಹಣವೇ? ಬಾಳು! ಈ ಹೊತ್ತು Eclipseಏ?

ಬಾಳು: ಎಲ್ಬಂತು ಸಾರ್?

ಅಹೋಬ್ಳು: Eclipse ಅಂದ್ರೆ ನಿನಗೇನಾದ್ರು ಗೊತ್ತೆ?

ಬಾಳು: ಗೊತ್ತು ಸಾರ್. ಗೊತ್ತೂಂದ್ರೇನು... ನಾನು Geography ಓದ್ತಿದ್ದಾಗ ಮೇಸ್ಟ್ರು...

ಅಹೋಬ್ಳು: Let me see! 'Eclipse of the Moonಉ' ಅಂದ್ರೇನು?

ಬಾಳು: Shadow of the... Earthoo...

ಅಹೋಬ್ಳು: On the whatoo?

ಬಾಳು: On the Moonoo.

ಅಹೋಬ್ಳು: Goodಉ, 'Eclipse of the Sunಉ' ಅಂದ್ರೆ ಏನು?

ಬಾಳು: Shadow of the... Moonoo...

ಅಹೋಬ್ಳು: On the whatoo?

ಬಾಳು: On the Sunಉ

ಅಹೋಬ್ಳು: Goodಉ Very goodಉ! **ಇದ್ದೇಳು** ನೋಡೋಣ 'Eclipse of the Earthoo' ಅಂದ್ರೇನು?

ಬಾಳು: (ಭ್ರುಕುಟಿಗಳನ್ನು ಗಂಟು ಹಾಕಿ) Eclipse of the Earthoo…? ಎಲ್ಲಾದ್ರು ಉಂಟೆ ಸಾರ್?

ಅಹೋಬ್ಳು: ಉಂಟು ಬಾಳು. ಉಂಟು. Shadow of the Sunಉ…

ಬಾಳು: Sunಗೆ shadow ಉಂಟೆ ಸಾರ್?

ಅಹೋಬ್ಳು: ಉಂಟು ಬಾಳು, ಉಂಟು. Shadow of my sonಉ on this Earthoo! (ಹಿಂದೆ ನೋಡಿ ಜೀವೂಗೆ) ಅಲ್ಕಣೆ! ಈ ಕರೀ ನಾಗ್ರ ಹುತ್ತ ಬಿಟ್ಟು ಹೊರಗ್ಹೊರ್ಡೋ ಅಷ್ಟೊತ್ತಗೆ school ಮುಚ್ಚಿಟ್ಟಿರ್ತಾರೆ. (ಕುಮಾರನಿಗೆ) ಇಲ್ಬಾರೊ ಉದ್ದಿನಮಣಿ ಯಾಕೋ ಇಷ್ಟು lateಉ…? (ಕುಮಾರನು ಮುಂದೆ ಬರುತ್ತಲೂ) ನೀನೋ! ನಿನ್ನ ಮಸಿ ಮೂತೀನೋ! ಜೀವು ಕೆಂಪು… ನಾನೋ ತಕ್ಕಮಟ್ಟಿಗೆ… ಜನಕನೇನು… ಆಮ್ಲಜನಕ! ಈ ಇಂಗಾಲ ಎಲ್ಬಂದು ಸೇರ್ಕೊಂಡ್ತು?

ಜೀವು: ಮುದ್ಮಣಿ ವರ್ಣ… ಅಲ್ಪ ಸ್ವಲ್ಪ ನಿಧಾನ ಆದಪಕ್ಷಕ್ಕೆ… ಹೀಗೆ ಹಿಯ್ಯಾಳಿಸೋದೇ?

ಅಹೋಬ್ಳು: ನಿಧಾನ? ಬಣ್ಣ ನಿಧಾನವಲ್ಲ… ನಿಸ್ತ್ರಾಣಿಯಾಗಿ ನಿಂತೇಚಿಟ್ಟಿದೆ! Stationery ಆಗಿ ! All ink and no paper! (ಮಗನ ಮುಖವನ್ನು ಗಮನಿಸಿ) ಇದೇನೇ ಇದು! ಮಾಧ್ವರ ಮಗೂಗೆ ಗಂಧದ ಬೊಟ್ಟಿಟ್ಟಿಧೀಯಾ ಹಣೇಗೆ!

ಜೀವು: ಗಂಧಾಲ್ಲಾಂದ್ರೆ, ಸಾದು.

ಅಹೋಬ್ಲು: (ಬೊಟ್ಟನ್ನು ಬೆರಳಿಂದ ಮುಟ್ಟಿ ಪರೀಕ್ಷಿಸಿ) ಹಯ್ಯೋ ಹೌದೇ ಮತ್ಯಾಕೇ ಗಂಧದ ಹಾಗಿತ್ತು? (ಅಲ್ಪ ಯೋಚಿಸಿ) Yes, yes! ಇವನ್ಮೂತಿ colourಗೆ ಸಾಧು ಗಂಧದ ಹಾಗೆ ಕಂಡು ಬರುತ್ತೆ : Question of comparative colorology!

ಜೀವು: ಹೌದೂ... ಮುದ್ಮಣಿ ಫೋಟೋ ಯಾವಾಗ ತೆಗಿಯೋದು?

ಅಹೋಬ್ಲು: Be sensible, ಜೀವು ! ಇದೇನ್ಹುಚ್ಚು! ಇವನಿಗೆ ಫೋಟೋ ತೆಗೆದು ಗೋಡೇಗೆ ತಗಲಿಹಾಕಿದ್ರೆ ತಸ್ಬೀರ್ನಾ, ಕತ್ಲೇ ಕೋಣೇಗೆ ಕಿಟಕಿ ಇಟ್ಟಿದಾರೆ ಅನ್ಕೊಂಡಾರು ಕಂಡೋವ್ರೆಲ್ಲಾ!

ಜೀವು: ಯಾಕೆ! ಕಪ್ಪಗಿದ್ರೂನೂವೆ ಕೆಂಪಗೆ ಕಾಣೋಹಾಗೆ ಫೋಟೋ ತೆಗಿಯೋಕೆ ಆಗೋದಿಲ್ವೇ?

ಅಹೋಬ್ಲು: Yesy, yes. The answer is in the "Negative!"...Negativeಲಿ ಕೆಂಪಗೇ ಇರ್ತಾನೆ. (ಮುದ್ಮಣಿಗೆ) ಇನ್ನೇನೋ! ಹೊರಡು ಸ್ಕೂಲಿಗೆ.

ಮುದ್ಮಣಿ: ಅತ್ಪಾ! ಧ್ಬಂಮ್ರೋಟು?

ಅಹೋಬ್ಲು: ಏನೋ ಅದು!?

ಜೀವು: ಧಮ್ರೋಟು... ಮಗು ಕೇಳುತ್ತೆ.

ಅಹೋಬ್ಲು: ಅದ್ರ ಭಾಷೇಲಿ ಕೇಳುತ್ತೆ! ಭಾಷಾಂತರಕ್ಕೆ ಹೆತ್ತ ತಾಯಿ ತಯಾರಾಗಿರ್ಬೇಕು... ಈ ಗೊಗ್ಗಯ್ಯ ಬಾಯ್ಬಿಟ್ಟಾಗ್ಲೆಲ್ಲಾ.

ಮುದ್ಮಣಿ: (ಗೋಳೋ ಎಂದು ಅಳುತ್ತ) ಅನ್ಮಾ! ಅತ್ಪಾ ಗೊಗ್ಗಯ್ಯ ಅಂಮ್ತಾನೆ!!!

ಜೀವು: (ಸುತನ ಕಪೋಲವನ್ನು ಚುಂಬಿಸಿ) ಅಳ್ಬೇಡ ಕಂದ! (ಪತಿಗೆ, ಬಿರುಸಾಗಿ) ಏನನ್ಯಾಯ ಅಂದ್ರೆ! ಕೂಸಿನ್ಮೇಲ್ಯೇ ತೋರ್ಸೋದು ನಿಮ್ಮ ಘಟ್ಟಿಗತನಾನ!

ಅಹೋಬ್ಲು: ಕ್ಷಮ್ಸು ಜೀವು... ಏನೋ ಅದು... ನೀನ್ಕೇಳಿದ್ದೂ... ಮುದ್ಮಣಿ?

ಮುದ್ಮಣಿ: ದ್ಭಂನ್ಮ್ರೋಟುತ್ತಾ!

ಅಹೋಬ್ಲು: ಸಾಕು ನೀನ್ಕೇಳಿದ್ದು. ಹೊರ್ಡು School ಗೆ.

ಮುದ್ಮಣಿ: (ಎರಡು ಹಸ್ತಗಳ ಹಿಂಭಾಗದಿಂದ ಕಣ್ಣುಗಳನ್ನು ಉಜ್ಜಿಕೊಳ್ಳುತ್ತ) ಅನ್ಮಾ! ಅತ್ತಾ! ದ್ಭಂಮ್ರೋಟು...

ಜೀವು: ಮಗು ಕೇಳೋದ್ನ ಕೊಂಡ್ಕೊಡೊ ಯೋಗ್ಯತೆ ನಿಮಗಿಲ್ದಿದ್ರೂನೂವೆ, ಅದೇನ್ಕೇಳುತ್ತೆ? ಅದಕ್ಕೇನ್ಬೇಕು? ಇದ್ನಾದ್ರೂ ಕಿವೀಗ್ಹಾಕ್ಕೋಬಾರ್ದೇ!

ಅಹೋಬ್ಲು: ಬಾರ್ದೇನೂ... ಬಹುದು! ಕಿವೀಗ್ಹಾಕ್ಕೋಬಹುದು! ಬಾಳು! ದೊಡ್ಡ Foolscape sheet ತೆಗೊ. ಚಿಕ್ರಾಯ್ರು ಬೇಕಾದ್ದನ್ನೆಲ್ಲಾ ಹೇಳ್ತಾರೆ. ತಪ್ಸೀಲಾಗಿ ಪಟ್ಟಿ ಬರ್ಕೊ. (ಕುಮಾರನಿಗೆ) ನಿನಗೆ ಇಹಲೋಕದಲ್ಲಿ ಇರೊ ಆಸೇನೆಲ್ಲಾ ಬಾಳು ಬಯೋರ್ ಪಟ್ಟೇಲಿ ತೀರ್ಸ್ಕೊಳ್ಳೋ! ನಿನಗೇನು ಬೆಕೂಂಬೋದ್ನ ಭಯವಿಲ್ದೆ ಹೇಳು. ಹೇಳೋ ಭಯ ನಿನಗೂ ಬೇಡ ಅದನ್ಕೊಂಡ್ಕೊಡೋ ಭಯ ನನಗೂ ಇಲ್ಲ. ಹೇಳು.

ಮುದ್ಮಣಿ: ಸ್ಭಕ್ರೆ!

ಬಾಳು: (ಪಟ್ಟಿಯಲ್ಲಿ ಬರೆದುಕೊಳುತ್ತ) ಸಕ್ರೆ.

ಮುದ್ಮಣಿ: ದ್ಬೆಲ್ಲಾ!

ಬಾಳು: ಬೆಲ್ಲ.

ಮುದ್ಮಣಿ: ಥ್ಬಾಟೀ ದ್ಬೆಲ್ಲ.

ಬಾಳು: ತಾಟಿ ditto.

ಮುದ್ಮಣಿ: ನ್ಮಿಠಾಯಿ!

ಬಾಳು: (ಬರೆದುಕೊಳ್ಳುತ್ತ) ಮಿಠಾಯಿ.

ಮುದ್ಮಣಿ: ತ್ಖೊಬ್ರಿನ್ಮಿಠಾಯಿ!

ಬಾಳು: ಖೊಬ್ರಿ ditto.

ಮುದ್ಮಣಿ: ತ್ಪಾಕಂಟ್ಪೊಪ್ಪು!

ಬಾಳು: (ಬರೆಯುತ್ತ) ಪಾಕಂಪೊಪ್ಪು.

ಅಹೋಬ್ಲು: (ಕೈ ಕೈ ಹಿಸುಕುತ್ತ... ಜುಗುಪ್ಸೆಯಿಂದ) ಹಾಳಾಯ್ತು! ಒಬ್ಬ ರಾಜಪುತ್ರನ್ನ "ನಿನಗೇನ್ಬೇಕು?" ಅಂತ ಕೇಳಿದ್ರೆ, "ನನಗೆ ಕತ್ತಿ ಬೇಕು! ಗುರಾಣಿ ಬೇಕು! ಬಿಲ್ಲು ಬೇಕು! ಬತ್ತಳಿಕೆ ತುಂಬಾ ಬಾಣಗಳು ಬೇಕು!"... ಇಲ್ಲ ಬ್ರಾಹ್ಮಣವಟೂನ ಕೇಳಿದ್ರೆ ರಾಮಾಯಣ ಮಹಾಭಾರತ ವೇದ ಪುರಾಣ ಇತ್ಯಾದಿಗಳ ಮೇಲೆ ಆಶೆ ಪಡೋದುಂಟು! ಆದ್ರೆ... ಧರ್ಮ್ರೋಟು, ತಾಟಿಬೆಲ್ಲ, ಪಾಕಂಪೊಪ್ಪು ಇದಕ್ಕೇಲೆ ಓಡೋದೇ ಇಲ್ಲ ಈ Double Distilled Dufferಇನ ಬುದ್ಧಿ!!!

ಮುದ್ಮಣಿ: (ತಾಯಿಯನ್ನು ಅಪ್ಪಿಕೊಂಡು ಗೊಳೋ ಎಂದು ಅಳುತ್ತ) ಅನ್ಮಾ! ಅತ್ವಾ ನನ್ನ 'ಡ್ಡಫರ್' ಅಂತ್ತಾನೆ!

ಜೀವು: (ಪುತ್ರಕನ ಫಣೆಯನ್ನು ಚುಂಜಿಸಿ ತಲೆಯನ್ನು ಸವರುತ್ತ) ಅಳ್ಬೇಡ ನನ್ನ ಅರಗಿಣಿ!... ಈ ತಿಂಡಿ ಪದಾರ್ಥ ಅಲ್ದೆ ಬೇರೆ ಏನೂ ಬೇಡ್ವೇ ನಿನ್ಗೆ?

ಮುದ್ಮಣಿ: (ಹಸನ್ಮುಖನಾಗಿ, ಕಣ್ಣುಗಳು ಬೆಳಕನ್ನು ಬೀರುತ್ತಾ)ದ್ಬೇಕೂ ನ್ಮಾ!

ಜೀವು: ಹಾಗಾದ್ರೆ... (ಗಲ್ಲವನ್ನು ಪಿಡಿದು ಕುಮಾರನ ಮುಖವನ್ನೆತ್ತಿ) ಕೇಳು ಕಂದ... ಕೇಳು!

ಮುದ್ಮಣಿ: (ಬಾಳುವಿಗೆ) ಬೂಗೋಳ!

ಅಹೋಬ್ಲು: "ಭೂಗೋಳ" I see! ಹುಡುಗ interested in Geography! Map of the worldಉ ಇಲ್ಲ Globeಓ ಕೇಳ್ತಿಧಾನೆ! Wonderful!... I must get...

ಬಾಳು: (ಅಡ್ಡ ಮಾತಾಗಿ) Map ಅಲ್ಲ ಸಾರ್! ಚಿಕ್ರಾಯ್ರು ಕೇಳೋದು ಭೂಗೋಳದ mark ಹಾಕಿದ ಪಟಾಕಿ ಕಟ್ಟು. (ಮುದ್ಮಣಿಗೆ) ಅಲ್ವೆ ಸಾರ್?

ಮುದ್ಮಣಿ: ಹೂಂ.

ಅಹೋಬ್ಲು: ನೆಗದ್ಬಿತ್ತು, ನನ್ನ hopeಉ!

ಮುದ್ಮಣಿ: Double ಜಿಂಕೆ!

ಅಹೋಬ್ಳು: “Double ಜಿಂಕೆ?”… I see! He means a double barrelled ಬಂದೂಕು to shoot a ಜಿಂಕೆ with! ಅದೇ… ಆ ರಾಜ ಪುತ್ರ…ಬಾಣ… ಬತ್ತಳಿಕೆ… ಗಾಂಡೀವ… ಪಾಶುಪತ… ಪದ್ಮವ್ಯೂಹ… ಇದೆಲ್ಲಾ ಕಿವೀಗ್ಬಿದ್ದು ಯಾವ್ದೋ ಪೂರ್ವಜನ್ಮದ ಸ್ಮರ್ಣೆ!… ಅಭಿಮನ್ಯುವೋ!… ಇಂದ್ರಜಿತ್ತೋ!… ಬಬ್ರುವಾಹನನೋ… ಸದ್ಯ ಬಂದೂಕು ಕೇಳ್ತಿಧಾನೆ… But then… licence for a child…?

ಬಾಳು: (ಅಡ್ಡ ಮಾತಾಗಿ) ಬಂದೂಕಲ್ಲ ಸಾರ್? ಚಿಕ್ರಾಯ್ರು ಕೇಳೋದು… ಎರಡು ಜಿಂಕೆ mark ಹಾಕಿದ ಸೂಜಿ ಪಟಾಕಿ ಕಟ್ಟು. (ಇದನ್ನು ಕೇಳುತ್ತಲೇ ಅಹೋಬ್ಳು ಬರುವ ಕೋಪವನ್ನು ನುಂಗಿಕೊಳ್ಳುತ್ತ ಎರಡೂ ಕೈಗಳ ಮೇಲೆ ಮುಖವನ್ನು ಇಳಿಸಿಕೊಂಡು ಪೇಚಾಡುವನು)

ಮುದ್ಮಣಿ : (ಹಸನ್ಮುಖನಾಗಿ ಬಾಳುವಿಗೆ) ದ್ಬರ್ರೀರ್ರಿ… ಫುರ್ ಫುರ್ ಬಾಣ!

ಬಾಳು: “ಸುರ್ ಸುರ್ ಬಾಣ?”

ಮುದ್ಮಣಿ: ಅಲ್ಲ **“ಫುರ್ ಫುರ್ ಬಾಣ!”**

ಬಾಳು: ಸುರ್ ಸುರು?

ಮುದ್ಮಣಿ: (ಮುಖದಲ್ಲಿ ಕೋಪವನ್ನೂ ಜುಗುಪ್ಸೆಯನ್ನೂ ಸೂಚಿಸಿ) **ಫುರ್ ಫುರ್ ಬಾಣ!**

ಬಾಳು: (ಮುದ್ಮಣಿಯ ಭಾಷಣದಿಂದ ಮುಖಕ್ಕೆ ಸಂಭವಿಸಿದ ಪ್ರಕ್ಷಾಳನವನ್ನು ಒರಸಿಕೊಳ್ಳುತ್ತಾ… ಅಹೋಬ್ಳುವಿಗೆ) ಸಾರ್! ಕನ್ನಡದಲ್ಲಿ ‘yeff’ ಹೇಗೆ ಬರಿಯೋದು ಸಾರ್?

ಅಹೋಬ್ಲು: (ಚೇತರಿಸಿಕೊಂಡು) 'yeff' ಎಲ್ಬಂತು ಇಲ್ಲಿ?

ಬಾಳು: ಚಿಕ್ರಾಯ್ರು ಸುರ್ ಸುರ್ ಬಾಣಾನ 'ಫರ್ ಫುರ್ ಬಾಣ' ಅಂತಾರೆ! ಕನ್ನಡ "ಸ"ನ English "yeff" ಆಗಿ ಬರೀಬೇಕೂಂತಾರೆ...

ಅಹೋಬ್ಲು: (ಎದ್ದು ಕುಮಾರನ ಕುತ್ತಿಗೆಯನ್ನು ಬಿಗಿಹಿಡಿದು ಬೀದಿಯ ಬಾಗಿಲಿಗೆ ಸಾಗಿಸುತ್ತ) ಸಾಕೋ ನಿನ್ನ ambition! ಸಧ್ಯ... ಸದ್ದಿಲ್ಲದೆ Schoolಗೆ ತೊಲಗು! ನನ್ನ School daysನಲ್ಲಿ ನಿನ್ನಂಥಾವ್ನು ಆ ಸಹಪಾಠಿಯಾಗಿದ್ದಿದ್ರೆ... ನಿತ್ಯ Morning Classಉ... Because of artificial ಅಮಾವಾಸ್ಯೆ! ಹೊರಡು! ಬಾಳು, ಜೊತೇಲಿ ಹೋಗಿ ಸೇರಿಸ್ಬಿಟ್ಟು ಬಾ.

(ರೋದಿಸುವ ಮುದ್ಮಣಿಯೊಂದಿಗೆ ಬಾಳು ನಿಷ್ಕ್ರಮಣ)

ಅಹೋಬ್ಲು: ರೇಗ್ಬೇಡ ಜೀವು... ಗಂಡು ಮಕ್ಕಳ್ನ ಸಾಕೋ ದಾರಿ ಗಂಡಸರಿಗೆ ಗೊತ್ತೇ ಹೊರ್ತು... ಹೆಂಗಸರಿಗೆ ಗೊತ್ತಿಲ್ಲ. ತಬ್ಕೊಂಡು ಮುದ್ದಿಟ್ಟು ಮನೇಲಿ ಸಾಕಿದ ಗಂಡ್ಮಕ್ಳು ಮುಂದಕ್ ಬೆಳೆದು ಮನೆ ಹೊಸ್ಲು ದಾಟಿ... meet ಆಗೊ ಪ್ರಪಂಚ... ಕಠಿಣ ಪ್ರಪಂಚ... ಬಾಬಾಂತ ತಬ್ಕೊಂಡು ಮುದ್ದಿಡೋ ಪ್ರಪಂಚವಲ್ಲ! ಮನೇಲೇ ಗಂಡು ಮಕ್ಕಳ್ನ ತಕ್ಕಮಟ್ಗೆ ಜಬರ್‌ದಸ್ತ್‌ನಲ್ಲಿ ಬೆಳ್ಸಿದ್ರೇನೇವೇಯೇ... ಮೈಯಿ ಮನಸ್ಸು ಗುಂಡಿಗೆ ಗಟ್ಟಿಯಾಗಿ, ಸಮಾಜ್ದಲ್ಲಿ ಒದಗೊ ಅನಿವಾರ್ಯಗಳ್ನ... ನಾನು ಈಗ ಹೇಗೆ ಎದ್ರುಸ್ತೇನೋ ಹಾಗ್ಯೇ ಎದ್ರುಸೋಕೆ ಚೈತನ್ಯ ಬರುತ್ತೆ. "ಕಂದಾ... ಅರಗಿಣಿ... ರಾಜಾ ಮಗೂಂ"ತs... ಹೆತ್ತ ಮಮತೇಲಿ ಹತ್ತಿ ಸುತ್ತಿಟ್ಟು ಬೆಳೆಸಿದ ಮಕ್ಳು... ಮುಂದಕ್ಕೆ...

ಜೀವು: ನೀವೇನು ಹೇಳಿದ್ರೂನವೆ... "ಹೆತ್ತವರಿಗೆ ಹೆಗ್ಣ ಮುದ್ದು!"

ಅಹೋಬ್ಳು: ಹೌದು ಆದ್ರೆ... ಆ ಹೆಣ್ಣಕ್ಕೆ ಹೆತ್ತವ್ರು ಮುದ್ದೇ? ಅದನ್ ಯೋಚಿಸ್ದ್ಯಾ? ಆ ಹೆಣ್ಣ "ನನ್ನ ಹೀಗೆ ಹೆತ್ಬಿಟ್ರಲ್ಲಾಂತ ಎಷ್ಟು ಬೈಬೇಕು...!"

ಜೀವು: (ಸಿಡುಕು ಮುಖದಿಂದ)ಸಾಕ್ನಿಲ್ಸೀಂದ್ರೆ ನಿಮ್ಗಾಣತನದ ಮಾತುಗ್ಳ...

(ನಿಷ್ಕ್ರಮಣ)

ಅಹೋಬ್ಳು: ಇದೇ... "woman the eternal motherಉ'' ಅಂಬೋದು. ಹೊಟ್ಟೇಲಿ ಹೊತ್ತು ಹೆತ್ತ sonನ husbandಏ ಹಿಯ್ಯಾಳಿಸಿದ್ರೂ... ರೇಗೋ ಅಷ್ಟು loveನ... nature ಇಟ್ಟಿದಾಳೆ ಹೆಂಗ್ಸಿನ heartನಲ್ಲಿ. Being a woman herself of course! But ಯಾವುದೋ poet ಹೇಳಿದ್ದಾಗೆ:

> "Woman may eat and weep and sleep
>
> But man must work and work and work."

Therefore... (ಮೇಜಿನಿಂದ law ಪುಸ್ತಕದ bind ಹಾಕಿದ ಒಂದು Film Magazine ಅನ್ನು ತೆಗೆದು ಓದತೊಡಗುವನು.)

ಜೀವು: (ಲೋಟ ಮುಚ್ಚಿದ ಕಾಫಿಯನ್ನೂ ತಟ್ಟೆಯಲ್ಲಿ ಬೋಂಡಾವನ್ನೂ ಎತ್ತಿಕೊಂಡು ಪ್ರವೇಶಿಸಿ, ಮೇಜಿನ ಮೇಲಿಟ್ಟು) ಇಕೋ... ಬಿಸಿ ಕಾಫಿ! ಅಲ್ದೆ ಬೋಂಡ!

ಅಹೋಬ್ಳು: Thank you, ಜೀವು. ಎಷ್ಟು ವ್ಯತ್ಯಾಸ ನೋಡು ನಿನ್ಗೂ ನನ್ಗೂ! ನಾನು ರೇಗೋದು... ಕಿರ್ಲೋದು... ನಗೋದು... ಅಳೋದು. ಹೀಗೆಲ್ಲಾ ನಿಮಿಷ ನಿಮಿಷವೂ ಬದಲಾಯಿಸುತ್ತೆ ನನ್ನ ಸ್ವಭಾವ. ನೀನು ...ಸ್ತ್ರೀಯರು "ಚಂಚಲ ಮನಸ್ಸೂ"ಂತ

ಸಾಂತಿಗ್ಳು ಎಷ್ಟು ಸಾರಿದ್ರೂನೂವೆ... ನನ್ನ ಹುಚ್ಚಾಟಾನೆಲ್ಲಾ... ಸೈರಿಸ್ತ... ಕ್ಷಮೆ... ಕ್ಷಮೆ... ಜೀವು... ನಿನ್ನ... ನಿನ್ನ ಏನು! ನಿಮ್ಮ ಹೆಂಗಸ್ರ ಗುಣಾನೇ ಕ್ಷಮೆ... ನಿಮ್ಮ Rock-bottom characterಉ... ಸಂಸ್ಕೃತದಲ್ಲಿ. ...ನನ್ನ Matriculation Textನಲ್ಲಿ ಎಲ್ಲೋ... ಬಂದ ಜ್ಞಾಪಕದ ಹಾಗೆ... "ಕ್ಷಮಯಾಧರಿತ್ರೀ"... (ಚೊಂಬಿನ ಕಾಫಿಯನ್ನು ಲೋಟಾಗೂ ಲೋಟಾವಿನ ಕಾಫಿಯನ್ನು ಚೊಂಬಿಗೂ ಬಿಸಿಯನ್ನು ಆರಿಲೋಸುಗ ವರ್ಗ ಪ್ರತಿ ವರ್ಗಾಯಿಸುತ್ತ) Wonderfulಉ!... (ಬಾಗಿಲನ್ನು ಯಾರೋ ತಟ್ಟುವ ಶಬ್ದ ಕೇಳಿ, ಲೋಟಾವನ್ನು ಚೊಂಬಿನ ಮೇಲೆ ಕುಕ್ಕಿ... ಬಾಗಿಲನ್ನು ಸಮೀಪಿಸಿ... ರೇಗಿ) ಎತ್ಕೊಂಡ್ಹೋಗು ನಿನ್ನ ಹಾಳು ಬೋಂಡ ಕಾಫೀನ! ಎಂದೂ ಬರದ ಹಾಳು Friendsಉ ಇಂದು ಬಂದಿದ್ದಾರೆ ಮಂದೆಮಂದೆಯಾಗಿ! Tiffenಉ ಎಲ್ತಾನೆ ಇಡು! Tiffen hours ಎಷ್ಟೆಷ್ಟಾನೆ change ಮಾಡು! Wirelessನಲ್ಯಾದ್ರೂ ತಿಳ್ಕೋತಾರೆ Friendsಉ! ಎತ್ಕೊಂಡ್ಹೋಗೆ ಒಳಗೆ ನಿನ್ತಟ್ಟೇನೂ... ಚೊಂಬ್ನೂ!

ಜೀವು: (ಆತುರದಿಂದ) ಕಾಫಿ ಆಹೋ... !?

ಅಹೋಬ್ಳು : ಹಿಂದ್ಗಡೆ ಸುಳಿದಾಡ್ತಿರೇ! ಸಮಯ ನೋಡಿ ಸುಕೋರ್ತೇನೆ!

(ಜೀವು ತಟ್ಟೆಯನ್ನೂ ಚೊಂಬನ್ನೂ ಲೋಟವನ್ನೂ ಎತ್ತಿಕೊಂಡು ಮನೆಯೊಳಕ್ಕೆ ನಿಷ್ಕ್ರಮಿಸುವಳು.)

(ಅಹೋಬ್ಳು ಬೀದಿ ಬಾಗಿಲನ್ನು ತೆಗೆದು Krishna Rao, Ranga Rao ಇವರನ್ನು ಒಳಕ್ಕೆ ಬಿಡುವುದಕ್ಕೆ ಮುಂಚೆ, ಮೇಜಿನ ಸುತ್ತೂ ಇರುವ ಕುರ್ಚಿಗಳನ್ನೆಲ್ಲಾ ಜೀವು ನಿಷ್ಕ್ರಮಿಸಿದ ಬಾಗಿಲಿಗೆ ಬೆನ್ನಿಟ್ಟು ಏರ್ಪಡಿಸುವನು.)

ಸ್ನೇಹಿತ್ರು: (ಪ್ರವೇಶಿಸುತ್ತ) ಇದೇನು, ಅಹೋಬ್ಳು? ಇಷ್ಟು ತಡ ಬಾಗಿಲು ತೆಗೆಯೋದು ಅರ್ಧ ಘಂಟೆಯಿಂದ...

ಅಹೋಬ್ಳು: Don't be silly boys! ಬನ್ನಿ, ಕೂತ್ಕೊಳ್ಳಿ, (ಸ್ನೇಹಿತರು ಕೂಡುತ್ತಲೂ) ನೀವೋ ಬಂದು... ಎರಡು ಮೂರು ತಿಂಗಳಾದ್ವು. ನನ್ನ್ Practiceಓ rising terribly. ಬರೀ feesಗೇಂತ ಬಂದ Clientsನೆಲ್ಲಾ welcome ಮಾಡ್ತಿದ್ದೆ, in my old days. ವಕಾಲತ್ feesನಲ್ಲೇ ಸಂಸಾರಾನ ಜರುಗಿಸ್ತಿದ್ದೆ, in my old days. Later on ಸಾವಿರಗಟ್ಲೆ fees ಸುರ್ಯೊ ಒಬ್ಬ Client ಇರುವಾಗ ಒಂದೊಂದು ರೂಪಾಯಿ ಕೊಡೊ ಸಾವಿರ Clientನ ದರ್ಶ್ನಕ್ಕೆ ಸಲಾಂ ಅಂತ Valuable Clientಉ ಜಮೀನ್‌ದಾರ್ lakhs of rupees involved... Therefore ಬೇರೆ ಯಾವ Clientsಊ ಬರ್ದ್ಹಾಗೆ ಬೀದಿ ಬಾಗಿಲು ಬಿಗಿದು Caseನ study ಮಾಡ್ತಿದ್ದೆ. ಈ ಬೀದಿಯೆಲ್ಲಾ ಲಾಯ್ರಿಗ್ಳು! ಒಬ್ಬೊಬ್ಬ ಲಾಯ್ರೀನೂ ಬೀದಿಬಾಗಿಲು ಬಿಚ್ಕೊಂಡು, ಜಗಲೀಲಿ ನಿಂತ್ಕೊಂಡು, ಹಲ್‌ಹಲ್ ಕಿರೀತ ಎರಡು ಕೈಯ್ಯಿಗ್ಳೂ ಬೀಸ್ತ, "ಬನ್ನಿ ! ಬನ್ನಿ! ದಮ್ಮಯ್ಯ ಬನ್ನೀ!"ಂತ ಪೇಚಾಡ್ತಿರೋವಾಗ ನಾನ್ಮಟ್ಗೆ ಬಾಗಿಲು ಹಾಕ್ಕೊಂಡು... ಬಡಾಯಿಯಿಂದೇನು ಪ್ರಯೋಜ್ನ!... ಒಟ್ನಲ್ಲಿ to apologetically explain my belated ಬಾಗಿಲು ತೆಗೆದದ್ನ... recordsಉ ತಿರುವ್ಹಾಕ್ತಿದ್ದೆ.

ಕೃಷ್ಣ್ರಾವ್: ಹಾಗಾದ್ರೆ... busyನೋ?

ಅಹೋಬ್ಳು: Busy ಏನು! Brain strainಉ ಕಿಟ್ಟಿ. ಅಲ್ದೆ... ನೆಗಡಿ.

ರಂಗ್ರಾವ್: ನೆಗಡಿ? ಬೇಸಿಗೇಲಿ?

ಅಹೋಬ್ಲು: ಒಳ್ಳೇ ಬೇಸಿಗೆ, ರಂಗು! ನೀನೆಲ್ತಾನೆ ಬಿದ್ಕೊಂಡಿರು, ಎಂಥ wool ತಾನೆ ಹೊದ್ಕೊಂಡಿರು, ಆ half past two in the morning ಬೀಸುತ್ತಲ್ಲಾ ಒಂದು breezeಉ... ಅದ್ರ ಛಳೀಲಿ...

(ಮೂಗನ್ನು ಹಿಡಿದುಕೊಂಡು, ಸೀನು ಬರುವಂತೆ ನಟಿಸಿ)

ಕ್ಷಮ್ಸಿ boys... ಬಂದ್ಬಿಟ್ಟೆ.

(ಒಳಹೊಕ್ಕು ಜೀವುವಿಗೆ ಸಂಜ್ಞೆಮಾಡಿ, ಆಕೆ ತಂದ ಕಾಫಿಯನ್ನು ಬಕಬಕನೆ ಬಾಯಿಗೆ ಬಸಿದುಕೊಂಡು, 'ಅಹ್ಂಂ ಛಿಂಂ!' ಎಂದು ಸೀನಿ. ಮೂಗಿನಿಂದ ಸೆಳೆದ ಸಿಂಬಳವನ್ನು ಧೋತ್ರದಲ್ಲಿ ಒರಸಿದಂತೆ ನಟಿಸುತ್ತ, ಪುನಃ ಪ್ರವೇಶಿಸಿ ಹೊಸಲಿನ ಮೇಲೆ ಕ್ಷಣ ನಿಲ್ಲುವನು.)

ಕಿಟ್ಟಿ: (ಥಟ್ಟನೆ ಮೂಸಿ ಮುಖದಲ್ಲಿ ಆಶ್ಚರ್ಯವನ್ನೂ ಸಂತೋಷವನ್ನೂ ಸೂಚಿಸಿ) ರಂಗೂ! ಮೂಸ್ನೋಡೊ... ಘಾಳಿ ವರ್ತಮಾನ... ಬೋಂಡ!...ಬರುತ್ತೆ!

ರಂಗು: (ತಾನೂ ಮೂಸಿನೋಡಿ ಹಿಗ್ಗಿ... ಕಣ್ಣುಗಳು ಹೊಳೆಯುತ್ತ) ಹೌದು ಕಿಟ್ಟೀ!... ಬೋಂಡಾನೇವೇಯೇ! ಬರೋವರಿಗೂ ಇಲ್ಲೇ ಠಿಕಾಣಿ ನಾವಿಬ್ರು.

ಅಹೋಬ್ಲು: (ಆತ್ಮಗತಂ) ಘಟಿಂಗ್ರು! ಕಂಡ್ಬಿಡ್ಕೊಂಡ್ರು... ಬೋಂಡಾ ವಾಸ್ನೇನ! ಆದ್ರೇನ್ಮಾಡೋದು!... ವಾಸ್ನೆ ಬಿಡೊ ಬೋಂಡ! ಹೋದ ಬೋಂಡ. ಬರೋ ಬೋಂಡ ಅಲ್ಲ!!... ಕಾದಿರಿ. ನನಗೇನೂ ನಷ್ಟವಿಲ್ಲ. ಕಾಡಿಗೆ ಹೋದ್ರೂ COmpany ಇರಬೇಕು... as Lakshmana said to Rama and Setha

(ಒಳಗೆ ಪ್ರವೇಶಿಸಿ)

ಆ De la Law caseನಲ್ಲಿ… prima facie evidenceಉ…

ರಂಗು: ಹೌದು… ಆ ಜಮೀನ್ದಾರ್ Case ಅಂದ್ಯಲ್ಲಾ ಏನದು?

ಅಹೋಬ್ಲು: Political secret, my boy! ನಮ್ಮ clients ನಮಗೆ ಹೇಳಿದ secrets ಎಲ್ಲಾ…doctorsಗೆ patients ಹೇಳಿದ symptoms ಹಾಗೆ… sacredಉ… until they are brought out in the Public Court!… (ಬಾಗಿಲನ್ನು ಯಾರೋ ತಟ್ಟುವುದು ಕೇಳುತ್ತಲೂ) Good God! Who is it? This must be He! (ಬಾಗಿಲಿಗೆ ಹೋಗಿ, ತೆಗೆದು, ಪರಶುವಿನ ಪ್ರವೇಶಕ್ಕೆ ಅವಕಾಶ ಕೊಟ್ಟು… ಹಿಮ್ಮೆಟ್ಟಿ… ಮೆಲ್ಲಗೆ) ಯಾರು ನೀವು?

ಪರಶು: (ಪ್ರವೇಶಿಸಿ) ನಾನ್… ಒಂದ್… ಕಕ್ಷಿಕಾರನ್. ಇತು ಲಾಯರ್ ವೀಡ್ ತಾನೆ?

ಅಹೋಬ್ಲು: ಹೌದು… ಲಾಯ್ರು ಮನೆ, ಏನು caseಉ…?

ಪರಶು: ಔತು… ತೊಟ್ಟ Caseಉ. ತೊನ್ನೂರು ರೂಬಾಯಿ caseಉ.

ಅಹೋಬ್ಲು: ತೊನ್ನೂರು? ತೊಂಬತ್ತು ನೂರು ರೂಪಾಯೇ…? ಒಂಬತ್ತು ಸಾವ್ರ ರೂಪಾಯಿ caseಏ?

ಪರಶು: ಇಲ್ಲ. ತೊನ್ನೂರ್… ಅಂದರೆ ನೂರ್ಕು… ಪತ್ ರೂಪಾಯಿ ಕಡಮೆ. ಒಂಬತ್… ಹತ್ ರೂಪಾಯಿ.

ಅಹೋಬ್ಳು: ತೊಂಬತ್ತು ರೂಪಾಯಿ caseಏ?...at five percent ನಾಲ್ಕೂವರೆ ರೂಪಾಯಿ not too little... ಬನ್ನಿ ಒಳಗೆ... ಹೌದು; ನಾನೂ ನಶ್ಯ ಹಾಕೋವ್ನೇ... ನೀವೂ ಹಾಗ್ಯೇಂತ ಕಾಣುತ್ತ, ಆದ್ರೆ ಕಂಡ್ಬರೋಹಾಗೆ ನಶ್ಯ ಬಾಕಿ ಇರೋದ್ನ ಒಸ್ಕೊಂಬಿಡಿ.

ಪರಶು: (ಮೂಗಿನ ತಳಭಾಗವನ್ನು ಸವರುತ್ತ) ಇತು ಮೂಕ್ಕುನಲ್ಲಿ ನಸ್ಯತ ಪಾಕಿ ಅಲ್ಲ! ಇತು ನನ್ನ ಮೀಸೆ.

ಅಹೋಬ್ಳು: ಮೀಸೇನೊ? ಕ್ಷಮಿಸಬೇಕು. ತಮ್ಮ ಹೆಸ್ರೇನು?

ಪರಶು: ಪರಶುರಾಮನ್.

ಅಹೋಬ್ಳು: ಚೆನ್ನಾಗಿದೆ ಹೆಸ್ರು. ಹೆಸ್ರಪ್ರಕಾರ ಆಯುಧಪಾಣಿಯಾಗಿ ಬಂದಿದ್ದಿದ್ರೆ ನನ್ನ Client ಕೆಂಪೇಗೌಡನಿಗೆ ಕುಮ್ಮಕ್ಕ್ ಕೊಡಬಹುದಾಗಿತ್ತು! ಇರ್ಲಿ, ತಾವು ಯಾವೂರು! ಯಾವ ಪಂಗ್ಡ? ಯಾವ್ಜಾತಿ? ಜಾತಿಯೇನು ಜನಿವಾರ ಇದೆ... ಆದ್ರೂ...

ಪರಶು: ನಾನ್ ಅಯ್ಯರ್ ಜಾತಿ.

ಅಹೋಬ್ಳು: ಅಯ್ಯರಿ?... ಹಾಗಾದ್ರೆ ಮೀಸೆ ಎಲ್ಲೀದು ನಿಮಗೆ?

ಪರಶು: ನಮ್ಮ ಜಾದಿಕಿ ಮೀಸೆ ಇಲ್ಲ. ಆತರೆ ನಾನೇನು ಮಾಡುವದ್? ನಮ್ಮ ತೇಶತಲ್ಲಿ ನಮಕ್ ಮೀಸೆ ಇಲ್ಲ. ನಿಮ್ಮ ತೇಶತಲ್ಲಿ ನಿಮಕ್ ಮೀಸೆ ಇದೆ. ಇಂದ ಮೈಸೂರು ತೇಶತ್ಲೆ... ಮೈಸೂರಿಕಳ್‌ಕ್‌ತಾಂ ಕೆಲಸ ಕುಡುಕ್‌ತಾರೆ! ಮತರಾಸಿಕಳ್‌ಕ್ ಕೆಲಸಂ ಕುಡುವತಿಲ್ಲ! ನನಕ್... ಎನಗೆ... ಮೈಸೂರು ಪಾಷೆ... ಕನಡಂ ಪಾಷೆ ಚೆನ್ನಾಕಿ ಕೊತ್ತ್! ಇನ್ ಮೀಸೆಯುಂ ವೆಚ್ಚಿಕೊಂಡ್‌ಪಿಟ್ಟ್ರೆ... ನನ್ನ ಮೈಸೂರೀಂತ ತಿಳಿತ್‌ಕಂಡ್ ಎಲ್ಲಿ

ಪೋನಾಲಂ... ಎಂಗೆ... ಓತರೂ... ಕೆಲಸಂ... ಕುಡ್ತ್ ಬಿಡ್ತಾರೆ. (ಎಂದು ಹಲ್ಲುಹಲ್ಲು ಕಿರಿಯುವನು)

ಅಹೋಬ್ಳು: (ಬೆಚ್ಚಿಬಿದ್ದು... ಸುಧಾರಿಸಿಕೊಳ್ಳಲು ಒಂದೆರಡು ನಿಮಿಷಗಳಾದ ಮೇಲೆ) ಹಾಗಾದ್ರೆ ಕನ್ನಡಂ ಪಾಷೆ ನಿಮಗೆ ಚೆನ್ನಾಗಿ ಕೊತ್ತೋ? ಮೈಸೂರಿಗ್ಳು ಕೆಲ್ಸ ಕೊಡೋಕ್ಕುಂಚೆ, ನೀವೇ ಮೈಸೂರಿಗ್ಳಿಗೆ ಕೆಲ್ಸ ಕೊಡೋ ಹಾಗಿದೆ! ಅದೇನ್ಕೆಲ್ಸ ಅದೇನ್ಕಸ್ಬು ನಿಮ್ದು?

ಪರಶು: ಕಸಪ್ ಏನೂ! ಅಯ್ಯರಿ ಕಸಪ್.

ಅಹೋಬ್ಳು: ಅಯ್ಯರಿ ಕಸಬು ಅಂದ್ರೆ ಎಷ್ಟೋ ಈಗ ನಮ್ದೇಶ್ದಲ್ಲಿ ಯಾವ ಯಾವ್ಕಸಬ್ಲೂ ಯಾವ್ಯಾವಿಲಾಖೇಲೂ ಅಯ್ಯರೀದರ್ಶ್ನಾನೆ! ಸರ್ವತ್ರ P. C. ಆಗಿ ಕೂತಿದ್ದಾನೆ. Perfect Cookಊ ಅಯ್ರೀನೆ, Police Constableಊ ಅಯ್ರೀನೆ! ಪಕ್ಕ ಚೋರೂ ಅಯ್ರೀನೆ, Police Commisionerಊ ಅಯ್ರೀನೆ! Physical CUlturistಊ ಅಯ್ರೀನೆ! Privy COuncillorಊ ಅಯ್ರೀನೆ! ಈ ಸಹಸ್ರ ಅಯ್ಯರ್ ಕಸಬುಗಳಲ್ಲಿ ನಿಮ್ದು ಯಾವ P. C.?

ಪರಶು: ಅಡಿಕೆ ಕೆಲ್ಸಜ್.

ಅಹೋಬ್ಳು: ಅಡಿಕೆ?

ಪರಶು: ಅಡಿಕೆ... ಅನ್ನ ರಸಂ ಉಳಿ... ಊಟ ತಯಾರ್ ಮಾಟುವದ್...

ಅಹೋಬ್ಳು: ಅಡಿಗೇನೆ!... ಹೌದೂ... ನೀವು ಕಣಿವೆ ಕೆಳಗಿನ Cookಉಗ್ಳು... ನಮ್ದೇಶಕ್ಕೆ ಬರೋದು... ಕನ್ನಡಿಗರಿಗೆ ಅಡಿಗೆ ಗೊತ್ತಿಲ್ಲಾಂತ್ಲೇ?

ಪರಶು: ಮೈಸೂರಿಕಳ್ಕ್ ಅಟಿಕೆ ಕೊತ್ತ್... ಆತರೆ ತಿಳ್ವ್ ಸಾರ್... ತಿಳಿಯರಸಂ ಮಾಟುವ್ತಕ್ಕೆ ಪರವುದಿಲ್ಲ... ನಿಮಗೆ ತಿಳಿಯ ರಸಂ ಕೊತ್ತಿಲ್ಲ ಮಾಟುವದ್...

ಅಹೋಬ್ಲು: ಓಹೋ! ತಿಳಿಯ ಸಾರುಮಾಡೋಕೇಂತ ಬಂದಿರೋದು ನೀವು! ಮತ್ತ್ಯಾಕೆ ನಾವು ಮೈಸೂರಿಗ್ಳು ಮೀಸೆ ಇಟ್ಕೊಂಡಿರೋದು? ಗಟ್ಸಾರು ಮಾಡಿಬಿಡ್ತೇವೆ; ಮೀಸೆ ಆಚೆಯಿಂದ ಬಾಯಿಗೆ ಬಿಟ್ಕೋತೇವೆ ಗಟ್ಸಾರ್ನ. ಮೀಸೆ ಒಂದು Jewel Filter ಆಗಿ... ತಿಳಿಯ ಸಾರು ಒಳಕ್ಕೆ ಹೋಗಿರುತ್ತೆ, ಅಲ್ದೆ Jewel filter ಹೊರಗಡೆ... ಹೆಸ್ರು ಕಟ್ಟೆ ಕಟ್ಕೊಂಡು. ...ತಯಾರು... **ತೊವ್ವೆ**!(ಆತ್ಮಗತಂ) ಹೌದು... ನನಗೀಗ ಬಂದಿರೊ clientಉ cookಊ ಅಂತ ನನ್ನ friendsಗೆ ತಿಳೀತೋ... ಖದರ್ ಕಮ್ಮಿ ಆಗುತ್ತೆ ನನಗೆ! (ಕಿಟ್ಟು ರಂಗುವನ್ನು ಸಮೀಪಿಸಿ, ಮೆಲ್ಲಗೆ) As I told you... ನಾನು ಹೇಳಿದ್ನಲ್ಲಾ... ಜಮೀನ್‌ದಾರ್ case ಅಂತ. This is the Rajah of... ಹೆಸ್ರು ಹೇಳ್ಬಾರ್ದು... disguiseನಲ್ಲಿ ಬಂದಿದಾರೆ. Diplomatic ಆಗಿ... situationನ negotiate ಮಾಡ್ಬಿಟ್ಟು... shall join you... (ಪುನಃ ಪರಶುವನ್ನು ಸೇರಿ) ಹೌದೂ, ಅದೇನು... ತೊಂಬತ್ತು ಸಾವ್ರಾನೊ ಇಲ್ಲ ತೊಂಬತ್ತು ರೂಪಾಯಿಗ್ಳ caseಉ ಅಂದ್ರಲ್ಲ... ಅದ್ರ ತಪ್ಸೀಲು ಏನು?

ಪರಶು: ನೋಟಿ: ನಾನು ಒಂದು ತೊಟ್ಟ ಮನುಷ್ಯರ ಮನೇಲಿ ಕೆಲ್ಸ ಮಾಡಿಕೊಂಡ್ ಇತ್ತೆ. ಅಡಿಕೆ ಕೆಲ್ಸಂ. ತಿಂಗಳ್ಕ್ ಪತಿನಂಜಿ... ಅತಿನೈತು ರೂಪಾಯಿ ಪೇಶಿಕೊಂಡಿದ್ದು. ಕೆಲ್ಸಂ ಮಾಡ್ತಾ ಮಾಡ್ದಾ "ಶಂಬಳಂ ಪರುವ ಮಾಸಂ ಕುಡುತ್ತೇನೆ... ಪರುವ ಮಾಸಂ ಕುಡುತ್ತೇನೆ"—ಈಕೆ ಏಳಿಕೊಂಡ್ ಆರು ತಿಂಗಳ್ ಕೆಲಸಂ ತಕೊಂಡ್‌ಪಿಟ್ಟ್ ಆಮ್ಮಾವ್ರ್ ಕೆಲಸತಿಂದ ವೆರಟಿಚಿಟ್ಟು.

ಅಹೋಬ್ಲು: ಕೆಲಸದಿಂದ ಒದ್ದೋಡ್ಸಿದ್ರೇ!? ಕಾರಣ?

ಪರಶು: ಅಮ್ಮಾವ್ರ್ "ನೀನು ಪಂದಾಕಿನಿಂದ ಮನೇಲಿ ಅರಶಿ ಪರ್‌ಪ್ ನೆಯ್ಯಿಪಾಲ್ ಲೆಕ್ಕಂ ಟಪಲ್ ಆಕಿ ಓಯ್ತ್! ಒರಟ್ ಓಗ್!" ಅನ್ನ್‌ವೆರಟಿಬಿಟ್ರ!

ಅಹೋಬ್ಲು: ಅಮ್ಮಾವ್ರು ಹೇಳಿದ್ರೇನು? ಯಜಮಾನ್ರಿಗೆ appeal ಮಾಡ್ಕೊಳ್ಳಿಲ್ವೆ? ನೀವು?

ಪರಶು: ಯಜಮಾನರನ್ನ್ ಕೇಳಿತೆ. ಅತಕ್ಕೆ ಅವರ್ "ಅಪ್ಪ, ನಾನು ಏನು ಮಾಟಲಿ! ನಿನಕುಂ ಯಚಮಾನಿ ಅಮ್ಮಾವ್ರ್; ನನಕುಂ ಯಚಮಾನಿ ಅಮ್ಮಾವ್ರ್! ಕಲಾಟೆ ಮಾಟತೆ... ಅಮ್ಮಾವ್ರ ಮಾತ್ ನಾನು ಕೇಳುವ ಆಕೆ... ನೀನೂ ಕೇಳಿಕೊಂಡ್ ಓರಟ್‌ಓಗಿ ಬಾ" ಅನ್ ಏಳಿತ್ರ್.

ಅಹೋಬ್ಲು: ಅಯ್ಯೋ ಪರಿಶೋಚನೀಯ ಪ್ರಾಣಿ! ನಿಮ್ಮ ಯಾಜಮಾನ್ರು ಹೇಳ್ತೇನೆ! ಹೌದೂ... ಮನೇಲಿ Home-ruleಉ ಇಲ್ದಿದ್ರೂನೂವೆ ಆತನಿಗೆ, ಮನೇಗೆ ಸಂಪಾದ್ಸೋವ್ನು ಆತ್ನೇ ಆಲ್ವೇ? ಸಂಬ್ಳಬ್ಬಾಬ್ತು ಹದ್ನೈದಾರ್ಲ ತೊಂಬತ್ತು... ಆತನ್ನ ಕೇಳಿದ್ರಾ?

ಪರಶು: ಔತು. ಕೇಳಿತೆ. ಆದರೆ ಆವು "ಅಪ್ಪಾ ನಾನೇನು ಮಾಟಲಿ! ನಿನ್ನ ನೋಟಿತರೆ ನನ್ನ ವಯರ್ ಎರಿಯಿತದೆ! ಆತ್ರೆ ನಾನೇನು ಮಾಟುವತ್! ಅಮ್ಮಾವ್ರೂ ಯಚಮಾನಿ. ಅಮ್ಮಾವ್ರ್ ನನ್ನ ಶಂಬಳತಲ್ಲಿ ಒಂದು ತಮ್ಮಡಿ ಕೂಟ ನನಕೇ ಕೊಟುವುತಿಲ್ಲ... ಇನ್ನ್ ನಿನ್ನ ಶಂಬಳಂ ನನ್ನ ಕೈಕೆ ಕುಡುಕ್‌ತಾರಾ? ನಿನ್ನ ಅತ್ರ ಕೊಂಜಂ ಪೊಡಿ ಇತ್ತರೆ ಕುಡ್ತ್‌ಬಿಟ್ಟ್ ಒರ್ಟ್ ಓಕ್ ಅಪ್ಪಾ!" ಅಂತ ಎನ್ನನಾ ಕಟ್ಟಿಕೊಂಡ್ ಕಣ್‌ಜಲಂ ವಿಡುತ್ತಾ ಕಳಿಸಿಬಿಟ್ರ್!

ಅಹೋಬ್ಳು: ಹಯ್ಯೋ ಪ್ರಾಣಿ! ದನದ್ವಾಗೆ ದುಡ್ಡು ಸಂಪಾದ್ಸಿದ ಸಂಬ್ಯಾನ ಧರ್ಮಪತ್ನಿ ಧರೋಡೆಗೆ ದಾನ ಇಟ್ಟು ನಶ್ಯಕ್ಕೆ ದಮ್ಡಿ ಕೂಡ ಇಲ್ಲೆ ಹೋಯ್ತೇ... ಆ ದೊಡ್ಡ ಮನುಷ್ಯನ್ಗೆ!

ಪರಶು: ಔತ್. ನನ್ನ ನೋಡಿ ಅವರ ವಯರ್ ಎರಿಂಜ ಆಗೆ ಅವರ ಪುಡಿಕಿ ಕೂಡ ಒಂದು ತಮ್ಮಡಿ ಇಲ್ಲದ ಅವಸ್ತೆ ನೋಟಿ ನನ್ನ ಒಟ್ಟೆಯಂ ಪೆಂಕಿ ಪೆಂಕಿ ಆಗಿ... ಓತರೆ ಓಕಲೀನ್ನ್ ನನ್ನ ಮದರಾಸ್‌ಪುಡಿ ಮಟ್ಟೆ ಅವರಿಕೆ ಕೊಟ್ಟೆ.

ಅಹೋಬ್ಳು: ಅದಾದ್ರು ಮಾಡಿದ್ರಲ್ಲಾ ಉಪಕಾರ!

ಪರಶು: ಅಂದ ಉಪಕಾರತಲ್ಲಿ ನನಕೆ ಅಪಕಾರ ಆಕಿ ಓಯ್ತ್.

ಅಹೋಬ್ಳು: ಅದೇನು?

ಪರಶು: ಎಂಟು ದಿವಸತ್‌ಕನ್ ವೆಚ್ಚಿಕೊಂಡಿದ್ದ ಮಟ್ಟೆ ನಶ್ಯತೆ ಒಂತೇ ಉರಿಂಚಿ ಉರಿಂಚಿ ಬಿಟ್... ಕಾಲಿ ಮಟ್ಟೆ ನನ್ನ ಕೈಗೆ ಕೊಟ್ಟು. "ಓರಟ್‌ಓಗ್‌ಅಂದ್ ಬಿಟ್ರ್".

ಅಹೋಬ್ಳು: ಎಲಾ ಕುಂಬಕರ್ಣ! ಎಂಟು ದಿನದ ನಶ್ಯ ಇದ್ದಟ್ಟೇನ ಒಂದೇ ಹೀರ್ನಲ್ಲಿ ಹೀರ್ಕೊಂಬಿಟ್ನೇ?!

ಪರಶು: ಔತ್! ರಾಯರಕ್ ತೊಟ್ಟ ಮೂಕ್! ತೊಟ್ಟ ಮೂಕ್!

ಅಹೋಬ್ಳು: ಹೆದ್ರಬೇಡಿ. ಆತನ್ನ ಕೋರ್ಟಿಗೆ ಎಳೆದು, ಸಹಧರ್ಮಿಣಿ ಸಮೇತ, ಆಕೆ ಬಾಯಿಂದ ನಿಮ್ಮ ಹದಿನೈದಾರ್ಲ ತೊಂಬತ್ತು ರೂಪಾಯ್ನ ಕೆಮ್ಮಿಸೋದೇ ಅಲ್ದೆ... ಆತನ್ಮೂಗಿನಿಂದ ನಿಮ್ನೆಶ್ಯಾನೆಲ್ಲಾ ಸೀನಿಸ್ಬಿಡ್ತೇನೆ! ಬನ್ನಿ! (ಮೇಜಿನ ಬಳಿ

ಕರೆದುಕೊಂಡು ಹೋಗಿ ವಕಾಲತ್ತನ್ನು ರುಜು ಹಾಕಿಸಿಕೊಂಡು) ಸಧ್ಯ ಖರ್ಚಿಗೆ ಒಂದು ಹದಿನೈದ್ರೂಪಾಯಾದ್ರೂ ಇಟ್ಟೋದ್ರೆ... ಮುಂದಕ್ಕೆ...

ಪರಶು: ಅತಿನೈತ್ ರೂಪಾಯಿ ಎಂಗಿರಂದ್ ತರುವದ್ ಸ್ವಾಮಿ? ಕೈಯಲ್ಲಿ ಒಂದ್ ಕಾಶಿ ಕೂಡ ಇಲ್ಲ!

ಅಹೋಬ್ಲು: ಮತ್ತೇನು, ಬಿಟ್ಟಿ ಕೆಲ್ಸ ಮಾಡೊಕೇಂತ Board ಹಾಕ್ಕೊಂಡಿಧೇನೇಂತ ತಿಳ್ಕೊಂಡಿಧೀರಾ?

ಪರಶು: ಇಲ್ಲ ಸ್ವಾಮಿ. Case ಚಯಮಾಗಿ ಪಂದ ರೂಪಾಯಿಲಿ ಇರವದ್ ರೂಪಾಯಿ ಇಡಿತ್ಕೊಂಡ್ ಪಾಕಿ ಕೊಟ್ರೆ ನನಕೆ ಪೋರುಂ.

ಅಹೋಬ್ಲು: (ಆತ್ಮಗತಂ) ಒಳ್ಳೇ ಹಣೇಬರಹ ನಂದು! ನನಗೆ ಬರೋ ಒಂದೊಂದು Caseನ feesನ always conditional on my successಉ... which again equally always is problematicಉ... and in this instance... particularly so. Therefore...per precedent provided by ಸೌದೇ ಒಡೀತೀರೋ ಕೆಂಪೇಗೌಡ... ಈತ್ನಿಂದ... in the shape of coin ಇಲ್ಲಿದ್ದ್ರೂನೂವೆ in kind ಆದ್ರೂ ವಸೂಲ್ ಮಾಡ್ಬೇಕು... Remunerationನ ! (ಪ್ರಕಾಶಂ) ಹೌದು. ನೀವ್ಹೇಳೋದೆಲ್ಲಾ ಅರ್ಥವಾಯಿತು. ಆದ್ರೆ ನೋಡಿ, ಸರ್ಕಾರ ಒಂದ್ಹೊಸ ಕಾನೂನು ಮಾಡ್ಬಿಟ್ಟಿಧೆ. ಸುಳ್ಳು caseಉ ಯಾರಾದ್ರು ತಂದ್ರೆ ಲಾಯ್ರುಹತ್ರ, ತಕ್ಷಣವೇ Policeಗೆ ಹೇಳ್ಕಳ್ಸಿ ಅವರ ಕೈಗೆ ಕಕ್ಷಿಗಾರನ್ನ ಒಪ್ಪಿಸ್ಬೇಕೂಂತ ವಿಧಿಸಿದೆ ಸರ್ಕಾರ.

ಪರಶು: ಶುಳ್ಳ್ case? ನಾನ್ ಬ್ರಾಹ್ಮಣ! ಪೊಯ್ಯಿ ಪೇಶುವುದಿಲ್ಲ ಸ್ವಾಮಿ! ನಿಶ ಕೇಸ್ ಇದ್!

ಅಹೋಬ್ಳು: ನೋಡಿ ಬ್ರಾಹ್ಮಣರ ಮೇಲೆ policeನವರ್ನ 'ಛೂ!' ಬಿಡೋಕೆ ನನಗೇನೋ ಇಷ್ಟವಿಲ್ಲ. ಆದ್ರೂ ನೋಡಿ, ನೀವು ಪರಿಚಾರಕಾಂತ ಬಾಯಿಂದ ಎಷ್ಟು ಹೇಳ್ಕೊಂಡ್ರೂವೆ... ನಿಮ್ಮೊಖದಲ್ಲಿ ಬೆಳಗುವ ಲಕ್ಷ್ಮೀಕಳೆ ನೋಡಿದ್ರೆ... ಯಾವ್ದೊ ಒಂದು ಪ್ರಭು ಹಾಗೆ ಕಂಡು ಬರುತ್ತೆ ನನ್ನ ಕಣ್ಣಿಗೆ. ನೀವು Cookಊಂತ ಹೇಳೋದ್ನ ಹೇಗ್ನಂಬೋದು ನಾನು? ಇದ್ನ prove ಮಾಡ್ಬಿಡಿ... ನಿಮ್ಮ caseನ ತೊಕೊಂಡು ಮುಂದಿನ ಕಾರ್ಯ ಮಾಡ್ತೇನೆ. ಇಲ್ಲವೋ... ನೀವಾಯ್ತು Policeನವರಾಯ್ತು.

ಪರಶು: (ಬೆಚ್ಚಿಬಿದ್ದು ಕೈಹಿಸುಕುತ್ತಾ) ನಾನು Cookಊ ಅಂತ ಇಲ್ಲಿ ಯಾಗೆ Prove ಮಾಟುವದ್ ಸ್ವಾಮಿ?

ಅಹೋಬ್ಳು: ಹೌದು. ನೀವ್ಹೇಳೋದು ಸರಿ. ಈ Chambersನಲ್ಲಿ ಆಗೋ ಕೆಲ್ಸವಲ್ಲ ಇದು. ನೋಡಿ! ಮನೇಲಿ ಅಕ್ಕಿ ಬೇಳೆ ತರ್ಕಾರಿ ಇವೆ. ಒಲೇನೂ ಕಟ್ಗೇನೂ ತಥಾ. ಮನೇಲಿ ಇರೋವ್ರು ನಾನು, ನನ್ನ ಗೃಹಿಣಿ, ನನ್ಪುತ್ರ. ನನಗೆ ಅಡಿಗೆ ಮಾಡೋದು ಗೊತ್ತಿಲ್ದಿದ್ರೂನೂವೆ ಮಾಡಿದ ಹುಳಿ ಸಾರು ಪಲ್ಯ ಇತ್ಯಾದಿಗಳಿಗೆ ಒಂದುಪ್ಪು ಹಿಂದೊ ಮುಂದೊ ಹೆಚ್ಚೊ ಕಮ್ಮೀನೊ ಹೇಳಬಲ್ಲೆ. ನೀವು ಮೂರು ಜನಕ್ಕೆ ಅಡಿಗೆ ಮಾಡಿ ಬಡಿಸಿ. ಅಷ್ರಲ್ಲೇ ತಿಳ್ಕೊಂಡ್ಬಿಡ್ತೇನೆ: ನೀವು ನಿಜವಾದ ಪರಿಚಾರಕರೋ, ಇಲ್ಲ ಸುಳ್ಳು Case ತಂದ ಪ್ರಭುಗ್ಳೊ ಅಂಬೋದ್ನ!

ಪರಶು : ಶರಿ ಓಯ್ತ್! ವಕೀಲ್ಮನೆಗೆ ಪಂದ್ರೆ ಶಮ್ಮೇಲೆ ಮಾಟುವ ಶನಿ ನನ್ನ ಪಿಟುವುತಿಲ್ಲ. ಆರು ತಿಂಗ್ಳ್ ಶಂಬಳಮಿಲ್ಲಾತೆ ಕೆಲಸಂ ಮಾಡಿತವನ್ಕ್ ಇನ್ನೊಂದ್ ತಿನ ಪಿಟ್ಟಿ ಪರಿಚಾರಕದಲ್ಲಿ ನಷ್ಟಂ ಏನೂ ಇಲ್ಲ. (ಕಟ್ಟಿದ ದಟ್ಟಿಯನ್ನು ಅರ್ಧ ಮಡಿಸಿ ಗಂಟು ಹಾಕುತ್ತ) ನೀರು ಮನೆ ತೋರಿಸಿ.

(ಅಹೋಬ್ಲ ಪರಶುವನ್ನು ಕರೆದುಕೊಂಡು, ಸ್ನೇಹಿತರಿಗೆ “Shall join you in a minute” ಎಂದೆಂದು ನಿಷ್ಕ್ರಮಣ, ಹಿಂದಿನ ಬಾಗಿಲಿಂದ)

ರಂಗು: ಬೋಂಡ ಯಾಕೆ ತಡಾನೋ ಕಾಣೆ. ನನಗೆ ಹಸಿವು!

ಕಿಟ್ಟಿ: ನನಗೂ ditto. ನಾನ್ಫಾಟಿ. ನೀನು ಫಾಟಿಯರ್‌ಉ. But ಅಹೋಬ್ಲ double ಫಾಟಿಯಸ್ಟ್ಉ! Courtಗೆ ಹೋಗ್ದೇನೇವೇಯೆ ಕಾಲಾ ತಳ್ಳೋ ಲಾಯೃದ್ರುಗೆ ನಮ್ಮ cleverness ಎಲ್ಲಿ! ನನಗೇನೋ ಆಗಾಗ್ಲೆ ನೆಗಡಿ, ಜಮೀನ್ದಾರ್ರೂಂಬೊ ನೆಪಗಳಿಟ್ಕೊಂಡು ಒಳಗೆ ಹೋಗ್ಬರೊ ಗಲಾಟೆಗಳ ಮಧ್ಯೆ... ಕಾಫಿ ಬೋಂಡಗಳ್ನ ಸ್ವಾಹಾ ಮಾಡ್ಬಿಟ್ಟಿದಾನೊ ಏನೋ ಕಾಣೆ!

ರಂಗು: ”ಏನೊ ಕಾಣೆ” ಏನೂ! ಹಾಗೆ ಏನಾದ್ರು ಆಗಿರ್ಬೇಕು. ಆದ್ರೆ ಇನ್ನೊಂದ್ಕಡೆ ಹೋಗೋಕೆ too lateಉ. ಇಲ್ಲೇ ಇದ್ಕೊಂಡು ಇನ್ಸ್ವಲ್ಪ ಹೊತ್ತು try ಮಾಡೋದು ಒಂದೇ hopeಉ... unless... ಇಷ್ಟೊತ್ನಲ್ಲಿ tiffin ಮಾಡೋ friendsಉ ನಿನಗ್ಯಾರಾದ್ರೂ...

ಕಿಟ್ಟಿ: ಇಧಾರೆ. But ಬರ್ತಾ ಬರ್ತಾ tiffin-hunter tricks ಎಲ್ಲಾ ತಿಳ್ಕೊಂಡು ತಿಂಡಿ time ಎಲ್ಲಾ change ಮಾಡ್ಬಿಡ್ತಾರೆ! ಹೀಗೆ ಒಂದೆರಡು ದಿನ ಆಗ್ತಾ ಬಂತು

disappoinmentಉ... ನಮ್ಮ ನಮ್ಮ tiffinಗಳ್ನ ನಾವ್ನಾವೇ ಒದಗಿಸ್ಕೊಳ್ಳೋಕೆ ಯಾವ್ದಾದ್ರು hotelಲಿ accountಉ open ಮಾಡ್ಬೇಕಾಗುತ್ತೇಂತ ಕಾಣುತ್ತೆ.

ರಂಗು: ಯಾವ್ದಾದ್ರು hotel ಏನು! ಒಂದೊಂದು hotelನಲ್ಲೂ ಇವೆ... ನಮ್ಮಿಬ್ರ accountಗ್ಳು!

ಕಿಟ್ಟಿ: ನಾನ್ಹೇಳಿದ್ದು Some New Hotel. Blazer Coatಉ ಬಿಳಿ ಷರಾಯಿ, Tennis shoesಉ ಇರೋವರಿಗೂ new hotelನಲ್ಲಿ accounts open ಮಾಡೋದು...

ಅಹೋಬ್ಲು: (ಪ್ರವೇಶಿಸಿ) Hullo boys! COngratulate ಮಾಡಿ ನನ್ನ! My client... the Zamindar of... ಹೆಸ್ರು ಈಗ ಹೇಳದಿದ್ರೂನೂವೆ... in a few days... Hindu, Times, Mailಗಳೆಲ್ಲಾ ಸಾರ್ತಿರ್ತವೆ: The great Zamindar's Succession Case involving an intricate point of Hindu Law... successfully expounded to the Court by the learned Counsel Mr. Ahoble Rao"... ಇಷ್ರಲ್ಲೇ ತಿಳ್ಕೊಂಬಿಡಿ ಈಗ ನನ್ನ situation ಎಷ್ಟು ಸೂಕ್ಷ್ಮ ಅಂಬೋದ್ನ. The Rajak Sab is having a bathಉ... ಕನ್ನಡ ಬಾತಲ್ಲ! English bathಉ! And afterwards through my humble hospitality ಮರಾಟ ಬಾತು plus some ಸಾರು and ಮಜ್ಜಿಗೆ. ಈ homely fare ಎಲ್ಲಿ?... ಆತನ Palaceನಲ್ಲಿ ಕಾದಿರೊ festive board ಎಲ್ಲಿ? But ಏನ್ ಮಾಡೋದು!... Princesಊ ಕೂಡಾ ತಲೆಬಾಗಬೇಕು to a lawyer under circumstancesಉ. (ಕುಳಿತುಕೊಳ್ಳುವನು)

ರಂಗು: ಇರ್ಲಿ, ಅಹೋಬ್ಲು. Lawಲಿ ಇಷ್ಟು ಘಟ್ಟಿಗ ನೀನು!... Prince Princeಗ್ಳೇ ನಿನ್ನ Clientsಉ! ಆದ್ರೂ ಈ ಹರಕಲು Coatಉ, ಮಾಸಿದ ರುಮಾಲು...?

ಅಹೋಬ್ಳು: ಅದೇ! The secret of my tradeಉ! ನನ್ನ ಕಸುಜಿನ ಗುಟ್ನ ಹೇಳಿಬಿಡ್ತೇನೆ in a nut shell… perhaps a Coco-nut shell. ನೋಡಿ: "ಹರಕಲು Coatಉ ಹರಕಲು ರುಮಾಲು ಹಾಕ್ಕೊಂಡ ಈ ಲಾಯ್ರೀನ ಇಟ್ರೆ ಖರ್ಚು ಜಾಸ್ತಿ ಆಗೋದಿಲ್ಲಾ"ಂತ ಬರುತ್ತ್ವೆ ಕಕ್ಷಿಗಾರ್ರು. ಕಕ್ಷಿಗಾರ್ರಲ್ಲಿ ಒಂದು peculiarity. Courtಗೆ ಹೋಗಬೇಕೂಂಬೋ plague ಹುಳು ಹೊಕ್ಕಿತೋ ರಕ್ತದಲ್ಲಿ… "ನನ್ಕಡೇನೇ ನ್ಯಾಯಾ"ಂಬೋ Ideaನ Brainಗೆ ಊದುತ್ತೆ ಈ ಹೊಕ್ಕ germಉ. "ಇಂಥ Clear caseಗೆ ಎಂಥ ಮಂಕು ಲಾಯ್ರೀನ ಇಟ್ರೂನೂವೆ ಗೆದ್ದೇಬಿಡುತ್ತೆ ನನ್ನ Caseಊ!"ಂಬೊ ಜೋರ್ನಲಿ Cheapest Lawyers ಹಿಡೀತಾನೆ Party. ನಾವೋ ವಕಾಲತ್ತು sign ಮಾಡ್ಸ್ಕೊಂಡು ಕಟ್ಟು ಕೈಗೆ ಸಿಗುತ್ಲೂವೆ clientನ ಜುಟ್ಟು ಕೈಗೆ ಸಿಕ್ಕಿದ ಹಾಗೇ: court feesಊ, stamp feesಊ, typewriting feesಊ, ಜಟ್ಕ feesಊ ಅಲ್ದೆ ಇವನ Caseನ ಗೆಲ್ಲೊ ಬಗ್ಗೆ ನಾನೇ ಬದುಕಿರೋಕೆ ಅಕ್ಕಿ feesಊ ಬೇಳೆ feesಊ etcಗಳ ಗಲಾಟೇಲಿ coatಉ bootಉ ಅಲ್ದೆ Parker Fountain Pen ಕೂಡ feeಜೊತೇಲಿ ಕೊಚ್ಕೊಂಬಂದ್ಬಿಡುತ್ತೆ. ಈ ದುಡ್ಡಿನ್ಕೊಬ್ಬೆಲ್ಲಾ Courtಗೆ ಬಂದ ಕಕ್ಷಿಗಾರನ ತಲೆ ಮೇಲೆ. ಇಲ್ಲ Cartಉ, compoundಉ, suitಉ, hatಉ, bootಉ. Bar-at-law ಬರೆದ Boardಉ ಹೀಗಿರೋವರ್ನ ನೋಡ್ದ್ರೋ… ಇವನ Carಉ Fordಉ, That's all he can affordಉ! ಪೆಟ್ರೋಲಿಗೆ ಕ್ಷವರ ಲೆಟ್ಟು, courtಉ, ಕಚೇರಿ and fees ಕೊಟ್ಟು clientಉ… Dogsಉ. ಈ Standard of perfectionಗೆ Overland qualificationsಉ! ಇಷ್ಟೆಲ್ಲಕ್ಕೂ ಇವನ್ಹೊಟ್ಟೇಗೆ Rolls O' Ragi ಸಿಕ್ಕೋದೇ ಕಷ್ಟ. ಈ ಕಾಲದಲ್ಲಿ ಬಂಡ್ವಾಳವಿಲ್ಲದ ಬಡಾಯ್ನೂ ಬಡಾಯಿ ಇಲ್ಲದ ಬಂಡ್ವಾಳಾನೂ ವಿಂಗಡ್ಸಿ ತಿಳ್ಕೊಳ್ಳೊ brainsಉ ವಿರಳ… in the world in general and litigants in particular. ಅದಕ್ಕೇ Homo Homini Lupusಊಂತ Dictionaryಲಿ ಅಂದಿರೋದು. (ಬೀದಿಯ

ಬಾಗಿಲನ್ನು ತೆರೆಯಲು ತಾಪಾಳು ಜಗ್ಗಿಸುವ ಸದ್ದನ್ನು ಕೇಳಿ) ಯಾರದು? (ಮುದ್ಮಣಿಯನ್ನು ಮುಂದಿಟ್ಟುಕೊಂಡು ಹಿಂದೆ ಬರುವ ಬಾಳುವಿಗೆ) ಇದೇನ್ಬಾಳು?

ಬಾಳು: ಕ್ಷಮ್ಸಿ ಸಾರ್! ಒಳಗೆ ಹೋದ್ರು ಚಿಕ್ರಾಯ್ರು; ಹೋಗಿ ಸ್ವಲ್ಪ ಹೊತ್ತಲ್ಲೆ ಹೊರಗ್ಬಂದ್ರು, Head Mastroo ತಮಗೆ ಬರೆದ ಒಂದ್ಕಾಗ್ದದ್ ಸಮೇತ Head Masterಉ "ಮಗು ಕೈಲಿ ಕೊಟ್ಟಿರೊ ಕಾಗದದಲ್ಲಿ ಎಲ್ಲಾ ಮಂದಟ್ಟಾಗುತ್ತೆ; ಮನೇಗೆ ಕರ್ಕೊಂಡ್ಹೋಗು" ಅಂದ್ರು Head Masterಉ.

ಅಹೋಬ್ಳು: (ಪುತ್ರನಿಗೆ) ಏನೋ… ಈ ಹೊತ್ತು Schoolನಲ್ಲಿ ವಿಶೇಷ?

ಮುದ್ಮಣಿ: ರೆಫಿಪ್ಟೇಷನ್ (Recitation) ಕಾಂನ್ಟೇಟ್ಟೇಷನ್ (Competition) ಅತ್ತಾ !

ಅಹೋಬ್ಳು: (ಸ್ನೇಹಿತರಿಗೆ) **My** son, you know! I mean, my son you **don't know**! For the last ಎರಡು ವರ್ಷದಿಂದ Recitation prizeಉ… he is knocking off. ಈ ವರ್ಷಾನೂ ಯಥಾ ಪ್ರಕಾರ. I think. Just like his father, you know! ಇವನ ವಯಸ್ಸಿನಲ್ಲಿ ಒಂದುಸಾರ್ತಿ… ಒಂದೇ ವರ್ಷ… three first prizesಉ ಬಂದ್ವು! ಯಾವ್ದಕ್ಕೇಂತ ನನಗೆ ಜ್ಞಾಪಕವಿಲ್ಲ. But I remember… only ಮೂರೂನೂ first prizeಗ್ಳು. ಅದರಲ್ಲಿ ಒಂದು was for memory! ಆದ್ರೆ… this little feller… recitation ಬಾಬತ್ನಲ್ಲಿ terribleಉ… ಇವತ್ತಿನ competitionಗೆ ಏನು ಹೇಳಿದ್ರೋ?

ಮುದ್ಮಣಿ : ಒನ್ಸ್ ಐ ಫಾ ಎ ಲಿಟ್ಟ್ಲ ದ್ಬರ್ಡ್

(Once) (I) (saw) (a) (little) (bird)

ಕಮ್ ಹಾಪ್ ಹಾಪ್ ಹಾಪ್

(come) (hop) (hop) (hop)

ಫೋ ಐ ಕ್ರೈದ್ ಲಿಟ್ಟ್ಲ ದ್ಬರ್ದ್

(So) (I) (cried) (little) (bird)

ವಿಲ್ಯು ಘ್ವಾಪ್ ಘ್ವಾಪ್ ಘ್ವಾಪ್

(will you) (stop) (stop) (stop)

ಅಹೋಬ್ಳು: Will you stop!... you see...

ರಂಗು: ಹೌದು, ಮೂರು ವರ್ಷ prizeನ ಇವನು ಈ recitationನಲ್ಲಿ knock off ಮಾಡ್ತಾ ಬಂದರೆ... ಮಿಕ್ಕ ಹುಡುಗರ ಉಚ್ಚಾರಣೆ must be...

ಅಹೋಬ್ಳು: Hopelessಉ ಅಂತೀಯ? Worse than that. Because ಇವನ್ನ ನಾನು ಕಳಿಸ್ತಿರೋದು... Deaf and Dumb Schoolಗೆ. So that, future lifeನಲ್ಲಿ ಇವನಿಗೆ speechನಲ್ಲಿ ಇರೋ impediments and resultant predicamentsನ Deaf and Dumb signs, geturesನಲ್ಲಿ, overcome ಮಾಡಬೇಕೂಂತ. Of course familyಗೆ, in general... ನಮ್ಮ mother‌ಉ... ಇವನ ಅಜ್ಜಿಗೆ... terrible disappointmentಉ! (ಕತ್ತನ್ನು ಬಗ್ಸಿ, ಮನಸ್ತಾಪವನ್ನು ಸೂಚಿಸುವನು)

ಕಿಟ್ಟಿ: ಅದೇನು disappointmentಉ, ಅಹೋಬ್ಳು?

ಅಹೋಬ್ಳು: (ಗದ್ಗದ ಸ್ವರದಿಂದ) You see, dear boys, ಇವನು ಹುಟ್ಟಿದ್ದು ಸರಸ್ವತಿ ಪೂಜೆ ದಿನ. "ಮುಂದಕ್ಕೆ ಮೇಧಾವಿ ಆಗಿ ಮನೆತನಕ್ಕೆ ಮೊಮ್ಮಗ ಯಶಸ್ಸೂ ಸಂಪತ್ತೂ ಸಂಪಾದ್ಸೋದ್ರಲ್ಲಿ ಸಂಶಯವೇನೂ ಇಲ್ಲಾ"ಂತ ನಮ್ಮಮ್ಮ "ಶಾರದಾ ಪ್ರಸಾದ್" ಅಂಬೊ ಹೆಸರಿಟ್ಟು ಇವನ್ಗೆ. But then, ನಾನು ಇವನು 'ಅಪ್ಪ', 'ಅಮ್ಮ', 'ಮಾಮ', 'ತಾತ', ಅಂಬೋದಕ್ಕೆ ಅವಸ್ಥೆ ಪಡೋವಾಗ್ಲೇನೇ ಒಬ್ಬ ನವಿಲುವಾಹನನ್ನ ಕರೆದು surgical operation ಮಾಡ್ಸೋದು ಬಿಟ್ಬಿಟ್ಟು, "Men supposes God disposes: so proposes and reposes ಅಂಬೋ Hindu Law ಪ್ರಕಾರ ತೆಪ್ಪನಿದ್ಬಿಟ್ಟೆ. ಶಾರದಾಪ್ರಸಾದನಾದ್ರು... ಆ ಸರಸ್ವತಿ ಇವನ ನಾಲಿಗೇಲಿ ಪಾತಿ ಮಾಡಿ ಗೊಬ್ರ ಹಾಕಿ... ಬೀಜಾಕ್ಷರ ಬಿತ್ತೋದ್ಮಟ್ಗ ಮರೆತುಬಿಟ್ಳೋ ಏನೋ ಕಾಣೆ! But... ಬಾಯ್ಬಿಡೋದ್ರಲ್ಲಿ ಸ್ವಲ್ಪ ಹಿಂದುಮುಂದಾಗಿದ್ರೂನೂವೆ brain and body, limbs, look and senses ಬಲು ಚುರುಕು. ಇವನು School Hockey teamಗೆ Centre forwardsಉ. First halfನಲ್ಲೇ twenty goals score ಮಾಡಿಧಾನೆ! Dhyan Chand ಯಾವ ಮೂಲೆ!

ರಂಗಣ್ಣ: Twenty goals in the first half! ಯಾವ teamಮೇಲೆ?

ಅಹೋಬ್ಳು: Against Bullanna's Blind School... Schoolಉ ಯಾವ್ದಾದ್ರೇನು? ಹುಡುಗ terrible! Again, as an old graduate, Convocation attend ಮಾಡ್ದೆ. And would you believe it? His Highness the Chancellor's Diamond Medal for the cleverest student... do you know!...at the last convocation... my boy knocked it off!... ಆದ್ರೆ unfortunately... Police Superintendent... notice ಮಾಡ್ಬಿಟ್ಟ... and my poor little boy had to put it back on the tableಉ! And now, fresh from the victory of his least

Recitation Competition… Head Masterಉ ಕೊಟ್ಟ ಕಾಗದದ ಸಮೇತ ಬಂದಿದಾನೆ… “ಕಾಗದದಲ್ಲಿ ಎಲ್ಲ ಮಂದಟ್ಟಾಗುತ್ತೇ”ಂತ Head Masterಉ ಹೇಳಿ ಕಳಿಸಿದ್ದಾರೆ… ಮಂದಟ್ಟಾಗೋದೇನು! ಹುಡುಗ ಗೆದ್ದ as per usual. Prizeನ ದುಡ್ಡಾಗ್ಯೇ ಕೊಡೋದೋ, ಇಲ್ಲ books ಆಗಿ ತೆಗೆದ್ಕೊಳ್ತೀರೋ? Or some such silly question… ಬಾಳು. ಆ ಕಾಗದಾನ ಓದು.

ಬಾಳು: (ಲಕ್ಕೋಟೆಯನ್ನು ಒಡೆದು ಕಾಗದವನ್ನು ಓದುತ್ತ) ಶಾರದಾಪ್ರಸಾದ್ ಬಿನ್ ಅಥ್ವ ಉರುಫ್ ಮುದ್ಮಣಿಯ ತೀರ್ಥರೂಪರವರಿಗೆ–

ಅಯ್ಯಾ, ತಮ್ಮ ಕುಮಾರ ಕಂಠೀರವರಾದ ಶಾರದಾಪ್ರಸಾದರು ಶಾಲೆಗೆ ದಯಮಾಡುವಾಗೆಲ್ಲ ಅವರ ವಪುಸ್ಸು ವಸನಗಳಲ್ಲಿ ಅಡಗಿಕೊಂಡಿರುವ ಕೊಳಕಿನ ದುಷ್ಪರಿಮಳವು ಪೊರೆಮಟ್ಟು ಶಾಲೆಯೆಲ್ಲಾ ಸಂಚರಿಸಿ… ಶಾಲೆಯ ಕೆಲಸಕ್ಕೆ ಒದಗುವ ಅನಾನುಕೂಲವೇ ಅಲ್ಲದೆ… ಸಹಪಾಠಿಗಳಾದ ಅರ್ಭಕಾನೀಕಕ್ಕೆ ಸಂಭವಿಸಬಹುದಾದ ಚರ್ಮಜಾಡ್ಯಗಳನ್ನೂ… ಶಾಲೆಯ ಸೂರು ಕಂಬಗಳು ಕುಸಿದು ಬೀಳಬಹುದಾದ ಅನಿವಾರ್ಯವನ್ನೂ ಅರಿತು… ಶಾರದಾಪ್ರಸಾದರಿಗೆ ಸ್ನಾನವನ್ನು ಮಾಡಿಸಿ ಶುಚಿಯಾದ ವಸನಗಳನ್ನು ತೊಡಿಸಿ, ಶಾಲೆಗೆ ಕಳುಹಿಸದ ಪಕ್ಷಕ್ಕೆ, ಮುಂದೊದಗಲೇ ಒದಗುವ building damages caseಗೂ… ಅಲ್ಲದೆ ಸರ್ಕಾರಿ Sanitary ಮೊಖದ್ದಮೆಗೂ ಜವಾಬ್ದಾರನಲ್ಲ ಎಂದು ಈಗಲೇ ತಿಳಿಯಪಡಿಸುವ

ತಮ್ಮ ಸೇವಕ.

S. P. Rao

Head Master,

Bullappa's D & D School

(ಈ ಕಾಗದವನ್ನು ಬಾಳು ಓದುತ್ತಾ ಓದುತ್ತಾ... ತಾವತ್ಕ್ರಮೇಣ ಅಹೋಬ್ಳು ಸುಸ್ತ್ ಆಗುತ್ತಾ ಆಗುತ್ತಾ... ಸಂದೇಶ ಅಂತ್ಯವು ಮುಟ್ಟುತ್ತಲೇ ಕೂತುಕೂತಿದ್ದ ಹಾಗೆಯೇ ಮೂರ್ಛಿತನಾಗುವನು. ಕಿಟ್ಟಿ, ರಂಗು, ಬಾಳು ಮೂವರೂ ಬೆಚ್ಚಿಬಿದ್ದು ಮೂರ್ಛಿತನನ್ನು ಸಮೀಪಿಸಿ ಶೈತ್ಯೋಪಚಾರ ನಿಮಿತ್ತ paperನಿಂದ ಘಾಳಿಯನ್ನು ಬೀಸುತ್ತಲೂ Coat, shirtನ ಗುಂಡಿಗಳನ್ನು ಬಿಚ್ಚಿ ಕೈಮೈಯನ್ನು ಅಲ್ಲಾಡಿಸುತ್ತ ಮೂರ್ಛಿತನು ಚೇತರಿಸಿಕೊಳ್ಳಲೋಸುಗ ಪ್ರಯತ್ನಪಡುವರು)

ಕಿಟ್ಟಿ: Mr. Balu, ಒಳಗೆ ಹೋಗಿ ಒಂದು ಟಂಬ್ಲರ್ ತಣ್ಣೀರು.

ರಂಗು: (ಅಡ್ಡ ಮಾತಾಗಿ, ಕಿಟ್ಟಿಗೆ ಮೆಲ್ಲಗೆ) ಬೇಡ್ವೋ! ಮಂಕು ! ಇದೊಂದೇ chance ನಾವಿಷ್ಟೊತ್ತು ಕಾದಿದ್ದೂ ಸಾರ್ಥಕವಾಗೋಕೆ! (ಘಟ್ಟಿಯಾಗಿ ಬಾಳುವಿಗೆ) Mr. Balu, ನಿಮ್ಮ ಸೀನೀರು swoon ಮಾಡ್ಬಿಟ್ಟಿದಾರೆ! ಒಳಗ್ಹೋಗಿ ಅಮ್ಮಾವ್ರಿಗೆ... "ಯಜಮಾನ್ರು ಮೂರ್ಛೆ. ಆದ್ರೆ ಭಯಪಡಬೇಕಾದ್ದೇನೂ ಇಲ್ಲ! ಒಂದು ದೊಡ್ಡ ಚೊಂಬು ತುಂಬ ಕಾಫಿ, ಒಂದು ತಟ್ಟೆ ಬೋಂಡ ಕಳಿಸಿಬಿಟ್ರೆ... ಯಜಮಾನ್ರು ಚೇತರ್ಸ್ಕೊಂಡು ಎಲ್ಲಾ ಸರಿಹೋಗುತ್ತೇ''ಂತ ತಿಳಿಸಿ ಭೇಗ!

ಅಹೋಬ್ಳು: (ಬಾಳುವಿನ ಕೈಯನ್ನು ಭದ್ರವಾಗಿ ಹಿಡಿದು... ನಿದ್ರೆಯಲ್ಲಿ ತೊದಲುವವನಂತೆ ಎಲ್ಲಿಧೇನೆ! ಹಾಂ!... ಯಾರಂದದ್ದು?... ಬೋಂಡ!! ಕಾಫೀಂತ!! (ಎದ್ದು ಕೂತು ಕಣ್ಣುಗಳನ್ನು ಉಜ್ಜುತ್ತ) Where am I?... ಕನಸು ! (ಸುತ್ತುಮುತ್ತು ನೋಡಿ)

ಕ್ಷಮ್ಸಿ, dear boys! Pure question of shockಉ! I am alright now. Take your seats. (ಗರ್ಜಿಸಿ) ಬಾಳು! ಕಾಗದವನ್ನೂ Steel penನ್ನೂ ತೆಗೆದುಕೊಂಡು ಬರಿ. (ಕಿಟ್ಟಿಯೂ ರಂಗುವೂ ಆಶಾಭಗ್ನರಾಗಿ ಪೀಠಗಳನ್ನು ಆಲಂಕರಿಸುವರು. ಬಾಳುವು ಶಾಯಿ ಕುಡಿಕೆಯಲ್ಲಿ ಅದ್ದಿದ ಪೇನಾಪಾಣಿಯಾಗಿ ತನ್ನ ಚಿಕ್ಕ ಮೇಜಿನ ಮೇಲೆ ಹರಡಿರುವ ಕಾಗದದ ಮೇಲೆ ದಣಿಯು ಚೀತ್ಕರಿಸುವ ಸಂದೇಶವನ್ನು ಲಿಖಿಸಲು ಉದ್ಯುಕ್ತನಾಗುವನು.)

ಅಹೋಬ್ಳು: "ತನಗೆ ತಿಳಿದ ಅಲ್ಪ ಸ್ವಲ್ಪ ವಿದ್ಯೆಯನ್ನು, ತನ್ನ ಬಳಿ ತಂದೆತಾಯಿಗಳು ಕಳುಹಿಸಿದ ಶಿಶುಗಳ ಮಿದುಳಿಗೆ ಸೋಕಿಸುವ ನೆಪದಿಂದ ಸದರಿ ತಂದೆ ತಾಯಿಗಳಿಂದ school fees ಮುಖಾಂತರವಾಗಿ ಸುಲಿದುಕೊಳ್ಳುವ ಹಣದಿಂದ ಬಸಿರನ್ನು ಬೆಳೆಸುವ... S. P. Rao?... **ಶಿಶುಪೋತರಾಯನಿಗೆ**. "ಹುಲಿಯೂರ್ ಅಹೋಬಲ್ ರಾಯರು ಹೇಳುವುದೇನೆಂದರೆ... ತಂದೆ ತಾಯಿಗಳು ತನುಜರನ್ನು ಪಾಠಶಾಲೆಗೆ ಕಳುಹಿಸುವ ನಿಮಿತ್ತವು, ಉಪಾಧ್ಯಾಯರುಗಳು ಮಕ್ಕಳಿಗೆ ಪಾಠವನ್ನು ಹೇಳುವುದಕ್ಕಲ್ಲದೆ ಮೇಲ್ಪೇಳಿದ ಮಕ್ಕಳ ಮೈ ಬಟ್ಟೆಗಳನ್ನು ಮೂಸಿ ನೋಡುವುದಕ್ಕಲ್ಲ!... ತೆಗೊಂಬಾ ಇಲ್ಲಿ! I shall sign it! (ಬಾಳುವು ತಂದ ಕಾಗದಕ್ಕೆ ರುಜು ಹಾಕಿ) ಮುದ್ರ್ಮಣಿ ಸಮೇತ ಈ ಕಾಗದಾನ School ಸೇರಿಸಿ... ಹೆಚ್ಚು ಮಾತಾಡಿದ ಅಂದ್ರೆ... "Lawyer ನಾನು! Libel case ಹಾಕಿ ಆ ಶಿಶುಪೋತ ಶನಿಯ ಕುಲಗೋತ್ರ ಕುಟುಂಬ ಕೊಂಪೆ ಕೊಂಪೇನ್ನೇ Courtಗೆ ಎಳೆದು ಹರಾಜು ಹಾಕಿಸ್ಬಿಟ್ಟೇನು! ಹುಷಾರ್!" ಅಂತ್ಹೇಳ್ಬಿಟ್ಟು ಬಾ, ಬಾಳು! (ಬಾಳುವು ಬೀದಿಬಾಗಿಲನ್ನು ಸಮೀಪಿಸುತ್ತ ಮುದ್ರ್ಮಣಿಯನ್ನು ಅಭಿನಯ ಪೂರ್ವಕ ಆಹ್ವೈಸುವನು)

ಮುದ್ಮಣಿ: ಅತ್ಪಾ! ಧ್ಭಣ್ಯ್ರೋಟು!

ಅಹೋಬ್ಳು: (ರೇಗಿದ ಹಿರಣ್ಯನು ಪ್ರಹ್ಲಾದನನ್ನು ತೊಲಗಿಸುವಂತೆ ಚೀತ್ಕರಿಸಿ) ತೊಲಗೋ!... ಪನ್ನೀರುದಾನಿ! (ಪುತ್ರನೂ Juniorಊ ನಿಷ್ಕ್ರಮಿಸುತ್ತಲೂ) Forgive me, dear boys! ಹೀಗೆ position and pelf, ಕುಟುಂಬ ಕಾಸು ಇಲ್ದೆ ಕಂಗೆಡ್ತಿರೊ ಕ್ರಿಮಿಗಳು ಮೇಸ್ಟ್ರುಗ್ಳಾಗಿ ಸೇರ್ಕೊಂಡು ಹುಡುಗರ್ನ ಹಿಯ್ಯಾಳಿಸಿ, ಇಂಥ Impudent Letters Parentsಗೆ ಬರಿಯೋಕೆ ಪ್ರಾರಂಭಿಸ್ದ್ಮೇಲೆ, Society ಎಲ್ಲಿ? Civic responsibility ಯಾರ್ದು? Police and Government ಯಾಕಿರೋದು? Cheap pay ಕೆಲ್ಸ ಮಾಡೊ School masterಊ parentsಗೆ ಇಂಥ 100% ಬರಿಯೋವಾಗ public hangman ಬಿಟ್ಟಿ ಸಂಬ್ಳ ಯಾಕೆ ಭಕ್ಷಿಸ್ತಿರ್ಧಾನೇಂತ ನಾನು ಕೇಳಬಹುದೆ? ಇಲ್ಲ, ಕೇಳ್ಬಾರ್ದೆ?... As a lawyer and also a loyal citizen... householder... Municipal tax payer... I ask you? ಮಗನ್ನ Schoolಗೆ ಕಳಿಸಿದ್ರೆ... ಪನ್ನೀರ್ಲಿ ಮಂಗಳಸ್ನಾನ ಮಾಡ್ಸಿ, "ಪುನಗು ಜವ್ವಾಜಿ ಕುಂಕುಮ ಕೇಸ್ರಿ ಗಂಧ ಕಸ್ತೂರಿ" ಲೇಪಿಸಿ... ವಜ್ರದ ಉಡಿದಾರಕ್ಕೆ ನೀರಾಜಿ ಲಂಗೋಟಿ ಕಟ್ಟಿ, ಜರ್ತಾರಿ ಪಂಚೆ ಸುತ್ತಿ, ಮಕಮಲ್ ಅಂಗಿ ತೊಡ್ಸಿ, ರತ್ನಖಚಿತವಾದ ಕಿರೀಟಾನಿಟ್ಟು ಅಂಬಾರೀ ಮೇಲೆ ಹುಡುಗನ್ನ ಸ್ಕೂಲಿಗೆ ಕಳಿಸಿದ್ರೇನೇವೇ... "ಆಟ! ಆ ಆಟ! ಊಟ! ಓಟ! ಆಗ ಆಟ! ಈಗ ಊಟ!" ಈ ಸೂಕ್ಷ್ಮ ವಿದ್ಯೇನ ನಿಮ್ಮ ಹುಡುಗನಿಗೆ ಉಪದೇಶಿಸ್ತೇನೆಂತ ಮೇಸ್ಟ್ರುಗ್ಳು ಹೊರ್ಟ ಮೇಲೆ...Parents ಗತಿ ಏನು? May I ask you? ಕೇಳ್ಬಹುದೇ?

ಕಿಟ್ಟಿ, ರಂಗು: (ಏಕಗ್ರೀವದಿಂದ) Of course... ಕೇಳಬಹುದು.

ಅಹೋಬ್ಳು: But what is the use? ಕೇಳೋವ್ನು ಕಿರುಲ್ತಿದ್ರೂನು... ಅದ್ನ ಕಿವೀಗ್ಹಾಕ್ಕೊಳ್ಳೊ ಒಬ್ಬನೂ ಬೇಡ್ವೇ ಈ ನಮ್ಮ Societyಲಿ?

ರಂಗು: ಬೇಕೇ ಬೇಕು ಅಹೋಬ್ಳು. But... ಕೋಪಿಸ್ಕೊಬೇಡ... Schoolಗೆ ಬರೋ ಹುಡುಗ್ರು... ವಾಸ್ನೆ...?!

ಅಹೋಬ್ಳು: ವಾಸ್ನೇಗೇನು! ಇದ್ದೇ ಇರುತ್ತೆ. Various boys various ವಾಸ್ನೇಸ್! ಬೆಳ್ಳುಳ್ಳಿ biting boys ಬೆಳ್ಳುಳ್ಳಿ ವಾಸ್ನೆ! ಈರುಳ್ಳಿ eating boys ಈರುಳ್ಳಿ ವಾಸ್ತೆ! ಕಳ್ಳೆಕಾಯ್ eating boys... ಒಟ್ನಲ್ಲಿ all sorts eatablesನ eating boys will now and then expire, exude or even explode all sorts of ವಾಸ್ನೇಸ್! Each boy his own individual ವಾಸ್ನೇ! Question of personal equation ಇದ್ನೆಲ್ಲಾ ಮೇಸ್ಟ್ರು ಗಮನಿಸ್ತಾಬಂದ್ರೆ detailed ಆಗಿ...?

ಕಿಟ್ಟಿ: But be charitable ಅಹೋಬ್ಳು! ಹೀಗೆಲ್ಲ ಸಗರ ವಾಸ್ತೆಗ್ಳ ಗಲಾಟೇಲಿ teacher ಗತಿ ಏನು?!

ಅಹೋಬ್ಳು: ಏನೇನು?! Fair play for all! Teacherಉ ಅವನ favourite smellನ... ಅವನಿಗೆ ಬೇಕಾದ Attar of Roses ಓ, ಆಟೊ ದಿಲ್ಬಹಾರೋ... for protection... ಇಲ್ಲ Gun Powderಓ... for destruction ತನ್ಮೂಗಿಗೆ ತುರುಕ್ಕೊಂಡು... ತಾನ್ಸುಲ್ಕೊಳ್ಳೋ ಸಂಬ್ಳಕ್ಕೆ ಸರ್ಯಾಗಿ ಪಾಠ ಹೇಳೋದೋ... ತನ್ನ Dutyನ ತಾನು discharge ಮಾಡೋದೋ... ಇಲ್ಲಾ... ಹೀಗೆ ಹುಡುಗರ ಕೈಲಿ ಕಾಗ್ದ ಕೊಟ್ಟು ಮಕ್ಕಳ್ನ schoolನಿಂದ ಮನೇಗೂ ಮನೆಯಿಂದ schoolಗೂ ಓಡಾಡ್ಸೋದೊ? ಒಟ್ನಲ್ಲಿ teachers ಎಲ್ಲಾ hopelessly bad for their profession and must all be dismissed!

ಕಿಟ್ಟಿ: ಹೌದು... dismiss ಆದ್ರೆ ಅವ್ರ ಗತಿ ಏನು?

ಅಹೋಬ್ಳು: Let them take to business! Businessನಲ್ಲಿ ಎಂಥಾ dufferಗೂ ದುಡ್ಡಿದೆ. But start ಮಾಡೋವಾಗ ಮಟ್ಟಿಗೆ ಹುಷಾರಾಗಿರ್ಬೇಕು. I shall give you an example. ಪುಳ್ಳಯ್ಯ ಅಂತಿದ್ದ ನಮ್ಮ friendಊ. Friend ಏನು... same streetಊ ಚಿಕ್ಕಂದ್ನಲ್ಲಿ ಹೊರ್ಳಾಡಿದ್ದು... same school ಸೇರಿ dismiss ಆದದ್ದು... same classಊ ಓದದೆ fail ಆಗಿ ಒದೆ ತಿಂದದ್ದು... ಆಮೇಲೆ ನನ್ನ LL.B. ಆದಾಗ್ಗೆ ಅವನ್ನ meet ಮಾಡಿದ್ದು. ಅಷ್ಟ್ರಲ್ಲಿ S.S.L.C.ವರಿಗು ಮುಟ್ಟಿದ್ರೂನೂವೆ ಎಷ್ಟೋ kinds of businessಗಳಿಗೆ ಕೈ ಹಾಕೀ ಹಾಕೀ ಕೈ ಸುಟ್ಕೊಂಡೋ ಕೈ ಕಚ್ಚೆಯೋ... ಒಂದು ಕಾಸು ಸಿಕ್ದಿದ್ರೇನೂ business worldನ experience ಮಟ್ಟೂ collect ಆಗಿ ತುಂಬಿ ತುಳುಕುತ್ತಿದ್ದ ಅವನ್ಮಂಡೇಗೆ ಒಂದು brilliant brain waveಊ ಹೊಳೀತು... Idea ಏನೋ simpleಊ... but yet promising. ಅವನ Idea: ಒಂದು ಕೋಳಿ ಕೊಂಡ್ಕೊಳ್ಳೋದು. ವಾರಕ್ಕೆ at least ಎರಡು ಮೊಟ್ಟೆಗಳು. ತಿಂಗಳಿಗೆ ಎಂಟು. Breakagesಗೆ allow ಮಾಡಿ ತಿಂಗಳು ತಿಂಗಳಿಗೂ four to eight, eight to sixteen, sixteen to thirty two... ಹೀಗೆ progression ಲೆಖ್ಖ mathematical ಆಗಿ Budget ಹಾಕಿ, ಐದು ವರ್ಷದಲ್ಲಿ ಒಂದು ಲಕ್ಷವಾದ್ರು ಗಿಟ್ಟೋ planಊ ಹಾಕ್ದ. Proceedಊ ಮಾಡ್ದ plan ಪ್ರಕಾರ. But ನಾನು ಹೇಳಿದ್ಹಾಗೆ... start ಮಾಡೋವಾಗ ಹುಷಾರಾಗಿರ್ಲಿಲ್ಲ. Therfore ಇಂಥ promising planಊ ಕೂಡ went 'phutt?'

ರಂಗು: ಅದೇನ್ಬೇಹುಷಾರಿ?

ಅಹೋಬ್ಳು : Terrible mistakeಊ. Because... ಅವನು ಮೊದಲು ಕೊಂಡ್ಕೊಂಡ ಕೋಳಿ... ಬೇರೆ ವಿಧವಾಗಿ turn out ಆಗ್ಹೋಯ್ತು.

ರಂಗು: What do you mean? ಬೇರೆ ವಿಧವಾಗಿ turned outಉ?

ಅಹೋಬ್ಳು: You see… The first **ಕೋಳಿ** he boughtಉ turned out to be… a **Cock**ಊ! ! ಹ್ಹ ಹ್ಹ ಹ್ಹ ಹ್ಹ ಹ್ಹ!(ಎಂದು ನಗುವನು. ಕಿಟ್ಟುವೂ ರಂಗುವೂ ಜೊತೆಯಲ್ಲಿ ಘೊಳ್ಳೆಂದು ನಗುವರು)

(ಈ ಮೂವರು ನಗುತ್ತ ಮೈ ಮರೆತಿರುವಾಗ ಕೆಂಪೇಗೌಡನು ನಿಶ್ಶಬ್ದವಾಗಿ ಒಳಗಿನಿಂದ ಪ್ರವೇಶಿಸಿ, ಮನೆಗೆ ಬರುವಾಗ ಇಲ್ಲದಿದ್ದ ಗಂಟೊಂದನ್ನು ಕಂಬಳಿಯಲ್ಲಿ ಸುತ್ತಿ ಬೆನ್ನಿಗೆ ಬಿಗಿದುಕೊಂಡು, ಬೆನ್ನು ವರಿಗೆ ಕಾಣದಂತೆ ಹಿಂದೆ ಹಿಂದೆ ಹೆಜ್ಜೆಯನ್ನಿಟ್ಟು ಬೀದಿ ಬಾಗಿಲನ್ನು ಸಮೀಪಿಸುವನು)

ಕಿಟ್ಟಿ: (ಗೌಡನನ್ನು ಗಮನಿಸಿ) ಯಾರದು?

ಅಹೋಬ್ಳು: (ತಿರುಗಿ, ಗೌಡನನ್ನು ನೋಡಿ, ಆತ್ಮಗತಂ) Good God! Client ಕೈಲಿ ಸೌದೆ ಒಡಿಸ್ಕೊಂಡೇಂತ ಇವರಿಗೆ ತಿಳೀತೋ… ನನಗೆ ಖದರ್ ಕಮ್ಮಿ… Therefore ಕೂಲಿ ಅಂತ… (ಪ್ರಕಾಶಂ) That is alright, boys, that is only a hired worker (ಗೌಡನಿಗೆ) ಏನೋ? ಸೌದೆ ಎಲ್ಲಾ ಒಡೆದಾಯಿತೆ?

ಗೌಡ: ಊಂ ಬುದ್ಧಿ. ಬತ್ತೀನಿ ಬುದ್ದಿ, ನನ್ನ ಕಟ್ನ…

(ಬೆನ್ನನ್ನು ಕೋಣೆಯಲ್ಲಿರುವವರ ಕಡೆ ತಿರುಗಿಸದೆ ಬಾಗಿಲನ್ನು ಹಿಂದೆ ಚಾಚಿದ ಕೈಗಳಿಂದ ತೆರೆದು, ನಿಷ್ಕ್ರಮಿಸಲು ಉಪಕ್ರಮಿಸುವನು)

ಅಹೋಬ್ಳು: ಆ ಮಾತು ನೀನು ಹೇಳ್ಬೇಕಾದ್ದಿಲ್ಲ, ಹೋಗು! ನಾನೆಲ್ಲ ನೋಡ್ಕೋತೇನೆ.

(ಗೌಡನು ನಿಷ್ಕ್ರಮಿಸುವನು)

ಕಿಟ್ಟಿ: But... ಅವನ ರುಮಾಲ್ನೂ ಕಂಬ್ಳೀನೂ ಕೋಲ್ನೂ ಬೆಳ್ಳಿ ಕಡಗಾನ್ನೂ ನೋಡಿದ್ರೆ ಬರೀ ಸೌದೆ ಒಡಿಯೋನ್ಹಾಗಿಲ್ವಲ್ಲ?

ಅಹೋಬ್ಳು: ಈ ಕಾಲ್ದಲ್ಲಿ... ನಮ್ದೇಶ್ದಲ್ಲಿ dignity of labour ಇಲ್ಲದೆ ಗರೀಬ್ರೂ ಗುಲಾಮ್ರೂ ತಮ್ಮ ತಮ್ಮ ಕಸುಬ್ನಲ್ಲಿ ನಾಚ್ಗೆಪಟ್ಕೊಂಡು ನವಾಬ್ರ ಹಾಗೆ ವೇಷ ಹಾಕ್ಕೊಂಡು ಮೆರಿಯೋಕಾಲ ಇದು. ದುಡ್ಡಿರೋರು ದುಡ್ಡು ಹೋಗುತ್ತೆ ಅಂಬೊ ಬೆದ್ರಕೇಲಿ ದರಿದ್ರರ ಹಾಗೂ ಬಡವರು ದವಡೆ ಊನಕ್ಕೆ ಬೆದರ್ಕೊಂದು ಧನಿಕರ ವೇಷವನ್ನೂ ಹಾಕ್ಕೊಂಡು ಸಮಾಜ್ದಲ್ಲಿ ಒಬ್ಬನ್ನೊಬ್ರು ಮೋಸ ಮಾಡೊ ಕಾಲ ಇದು! Take for instance; ನಮ್ಮನೇಲಿ ಇವತ್ತು ಅಡಿಗೆ ಮಾಡ್ತಿರೋ ಜಮೀನ್ದಾರ್... (ಆತ್ಮಗತಂ) Good God: wrong exampleಉ... (ಪ್ರಕಾಶಂ) I mean, ಅಡಿಗೆ ಆಯ್ತೇಂತ ಸ್ನಾನ ಮಾಡಿ ಕಾದಿರೋ ಜಮೀನ್ದಾರ್... ಇದೆಲ್ಲಾ ಯಾಕೆ? ಒಟ್ನಲ್ಲಿ ನಿನ್ನ life... ಸಮಾಜ್ದಲ್ಲಿ ಹೇಳ್ತೇನೆ... ನೀನು people ಕಣ್ಣಿಗೆ ದೊಡ್ಡವನಾಗಬೇಕೂಂದ್ರೆ money spend ಮಾಡಬೇಕಾದ್ದೇನು ಇಲ್ಲ... but show ಮಾಡ್ಬೇಕು! Hotelಗೆ ಹೋಗಿ, ಎಂಟಾಣೇಗೆ ತಿಂದು ಲಕ್ಷ ರೂಪಾಯಿ ನೋಟ್ನೆಟ್ಟು, "ಬೇಗಕೊಡಿ ಚಿಲ್ರೇನ" ಅಂತ ಕೇಳು: Building ತೆಗೊಂಡು ತಿಂಗಳು ಗಟ್ಲೆ ಬಾಡ್ಗೆ ಬಾಕಿ... ಇನ್ನುತಿಂದು ಹೋದ patron's ದುಡ್ಡೆಲ್ಲಾ problematic... account bookನಲ್ಲಿ ಇನ್ನೂ ಅಕ್ಕಿ, ಹಿಟ್ಟು, ಉರುಳುಗಡ್ಡೆ, ದಿನಸು ಬಾಕಿ... ಎಲ್ಲ ಸಾಲ... ಹೀಗೆ ಒದ್ದಾಡೋ hotelನವನ್ಮೇಜಿನ್ಮೇಲೆ ಎಂಟಾಣೆಗೆ ತಿಂದ ಮನುಷ್ಯ ಲಕ್ಷ ರೂಪಾಯಿ ನೋಟ್ನ ಕುಕ್ಕಿ, "ಚಿಲ್ರೆ ಕೊಡಿ" ಅಂದ್ರೆ ಏನ್ಹೇಳ್ಯಾನು? ಮೊದಲು sensible ಆಗಿ ಮೂರ್ಛೆ ಹೋಗಿ, icecreamನೋ fruit saladನೋ ಯಾರಾದ್ರೂ ಮಂಡೇಗೂ ಮುಖಕ್ಕೂ ಉಜ್ಜಿ,

ಜ್ಞಾನ ಬಂದು, ನೋಟು ಕುಕ್ಕೋನ್ ಕಾಲಿಗ್ಬಿದ್ದು, "ಕ್ಷಮ್ಸಿ ಪ್ರಭುಗ್ಳೆ! ಲಕ್ಷ್ಮಿಪುತ್ರರೇ! ಚಿಕ್ಕ ಹುಡುಗ್ರು ಪಠ ಓಡಾಡ್ಸೋ ಹಾಗೆ ಲಕ್ಷರೂಪಾಯಿ ನೋಟುಗಳ್ನ ಹೀಗೆ ಎಸ್ದಾಡೊ ತಾವು ನನ್ನ hotelನ ಅಲಂಕರಿಸಿದ್ದು ನನ್ನ ಹಿರಿಯರ ಪುಣ್ಯ. ತಾವು ಧರ್ಮ್ರೋಟು, ಮಸಾಲ್ದೋಸೆ, ಮಸಾಲ್ದೂದ್ನ ನನ್ನ hotelನಲ್ಲಿ ಅಂಗೀಕರಿಸಿದ್ದು ನನ್ನ ಪುರಾಕೃತ ಲಭ್ಯ" ಅಂತ ಕಣ್ಣೀರು ಸುರಿಸ್ತ ಹೊರಳಾಡ್ತಾನೆ. ಗತಿಗೆಟ್ಟು ಹೊಟ್ಟೆಕಾಯ್ತು ಒಬ್ಬ ಅದೇ hotelಗೆ ಹೋಗಿ... "ದಮ್ಮಯ್ಯ! ಪ್ರಾಣ ಹೋಗ್ತಿದೆ! ಸ್ವಲ್ಪ ಸೀನೀರು ಕೊಡೀ!"ಂತಗಾನ ಕೇಳಿದ್ನೋ ಗರೀಬ... ದವಡೇಗೇನು? ಬೆನ್ನೆಲುಬು plus ಸೊಂಟಕ್ಕೂ ಊನ! Therefore "ಹಸಿವು ನಿಮಿತ್ತಂ ವಿಧವಿಧ ವೇಷಃ!" ಇನ್ನೊಂದು example ಹೇಳ್ತೇನೆ, ಕೇಳೀ...

ಜೀವು: (ಒಳಗಿನಿಂದ) ಇಧೀರಾ!

ಅಹೋಬ್ಳು: Forgive me. Domestic call from my better-halfಉ (ಹಿಂದಿನ ಬಾಗಿಲನ್ನು ಸಮೀಪಿಸಿ) ಏನದು, ಜೀವು?

ಜೀವು: (ಒದ್ದೆ ಸೀರೆಯನ್ನು ಸುತ್ತಿಕೊಂಡು ಬಾಗಿಲಿನ ಹೊಸಲಿನಿಂದಾಚೆ ನಿಂತು ಸಿಡುಕು ಮುದ್ರೆಯಿಂದ) ಇದೇನು ಚೇಷ್ಟಗ್ಳು ಅಂದ್ರೆ ನಿಮ್ದು?

ಅಹೋಬ್ಳು: What do you mean? I mean...

ಜೀವು: ನಿಮ್ಮ ಮೀನು ಮೊಸ್ಳೆ ತಿಮಿಂಗ್ಲ ಈ ಬಾಬ್ತ್ನೆಲ್ಲಾ ಕಟ್ಟಿಟ್ಬಿಟ್ಟು... ನಾನು ನೀರ್ಮನೇಲಿ ಸ್ನಾನ ಮಾಡ್ತಿದ್ದಾಗ ಮುಚ್ಚಿದ ಬಾಗಿಲ ಮೇಲೆ ಮಡಿಸಿ ಹಾಕಿದ್ದ ಸೀರೇನ ಎಲ್ಲಚ್ಚಿಟ್ಟಿಧೀರ?

ಅಹೋಬ್ಳು: ನಾನ್ಯಾಕ್ಬಚ್ಚಿಡ್ಲೆ? ಆಗಿಂದೀಗಿನ್ವರ್ಗೂ ಮುಂದಿನ್ಕೋಣೆಲೆ ಇದ್ದೆ. ಆ ಅಡಿಗೇವ್ನು...?

ಜೀವು: ಅಡಿಗೆ ಮಾಡ್ತಿಧಾನೆ... (ತಟ್ಟನೆ ಒಳಕೋಣೆಯ ಸೂರನ್ನು ಗಮನಿಸಿ) ಹಯ್ಯೋ! (ಚೀತ್ಕರಿಸಿ) ಹಯ್ಯೋ! ಆ ಮಡಿ ಕೋಲ್ಕೇಲೆ ಹಾಕಿದ್ದ ಜರ್ತಾರಿ ಸೀರೆ... ಆನಂದ... ಅಂಜೂರ... ಕರಾಚಿ... ಬಡುಕೊಂಡೇ ನಿಮ್ಗುತ್ರ... ಒಂದು trunkಉ ಕೊಂಡ್ಕೊಡೀಂತ! ಎಲ್ಲಿ ಹೋದ್ವು? ಈ ಗಲಾಟೇಲಿ ಯಾರೋ ಕಳ್ರು... ಸೀರೇನೆಲ್ಲ...

ಅಹೋಬ್ಳು: (ಒಳಗೆ ನುಗ್ಗಿ ಓಡಾಡಿ) ಸೀರೆ ಹಾಳಾಗ್ಹೋಗ್ಲೇ... ಅಲ್ಮಾರಾಲಿಟ್ಟಿದ್ದ cash box ಎಲ್ಲೆ? ಈಗ ಇದ್ದಾಗಿತ್ತು! (ಹೊರಗೆ ಬಂದು) My God! Boys! Terrible robber! My wife's sariesಉ ಅಲ್ದೆ cash box... ಅದ್ರಲ್ಲಿ ನನ್ನ ಸ್ವತ್ತೆಲ್ಲಾ ಇತ್ತು... (ಅಂಬೆಗಾಲು ಇಡುವ ಶಿಶುವಂತೆ ಬರುತ್ತಿರುವ ಬೋರನಿಗೆ) ಬೋರಾ! ನಿನ್ನ ಹನ್ನೆರಡಾರ್ಲ ಎಪ್ಪತ್ತೆರ್ಡು ರೂಪಾಯಿ ಇಟ್ಟಿದ್ದ ಪೆಟ್ಟಿಗೇನ ಕೈಪೆಟ್ಟಿಗೇನ ಯಾರೋ ಲಪ್ಟಾಯಿಸ್ಬಿಟ್ಟಿದ್ದಾರೆ! ಹುಡುಕೋ! (ಬೋರನು ಮೇಜಿನ ಕೆಳಗೂ ಕುರ್ಚಿಗಳ ಕೆಳಗೂ ಓಡಾಡುವನು)

ರಂಗು: Perhaps... I may...

ಅಹೋಬ್ಳು: (ರೇಗಿ) ನಿನ್ನ perhaps ಮುಂಡಮೋಚ್ತು...! ನಿನ್ನ I may ಗೆ ಬೆಂಕಿಯಿಡ್ತು... ನನಗೆ cash box ಹೋಗಿರೊ ಅವಸ್ಥೇಲಿ...

(ಆಗತಾನೆ ಪ್ರವೇಶಿಸುತ್ತಿರುವ ಬಾಳುವಿಗೆ). ಬಾಳು ಹೋಯ್ತು! ಕೈ ಪೆಟ್ಗೆ ಹೋಯ್ತು! ನಮ್ಮ ಕಣ್ಣೆದ್ರುಗೆ ಕದ್ಕೊಂಡ್ಹೋಗಿದಾನೆ ಯಾರೋ ಕಳ್ಳ! ನಿನ್ನ ಆರು ತಿಂಗಳು ಸಂಬ್ಳ ಅದರಲ್ಲಿತ್ತು. ಒಳಗೆ ಹೋಗಿ ಹುಡ್ಕು, ಬಾಳು!

(ಬಾಳುವು ಒಳಕ್ಕೆ ನುಗ್ಗುವನು)

... ಯಾರಿರಬಹುದು? ನಾನಲ್ಲ... ನಂದು cash boxಉ. ಜೀವು ಅಲ್ಲ... ಸೀರೆs ಅವಳ್ದು... also a victim. ನೀವಿಬ್ರಲ್ಲ, ಕಣ್ಣೆದ್ರುಗಿದ್ರಿ. Bora and Balu... it must be the cook... I mean Jahagirdar (ಸಹಸ್ರ ರಾಕ್ಷಸರ ಧ್ವನಿಯನ್ನು ಅವಲಂಬಿಸಿ) ಅಯ್ಯರ್! P. C.!... ಅದೇ Perfect Cookಓ... ಪಕ್ಕ ಚೋರೋ... ಇಲ್ಲ bothಓ... ಈಗ ಗೊತ್ತಾಗುತ್ತೆ ಅಯ್ಯರ್!!

ಅಯ್ಯರ್: (ಮೊಣಕಾಲಿನ ಮೇಲೆ ಕಟ್ಟಿದ ತುಂಡಲ್ಲದೆ ವಸನರಹಿತನಾಗಿಯೂ ದೊಡ್ಡದೊಂದು ಸೌಟುಪಾಣಿಯಾಗಿಯೂ ಪ್ರವೇಶಿಸಿ) ಏನು ಸ್ವಾಮಿ! (ಸಿಡುಕು ಮುಖದಿಂದ) ನೀವ್ ಮೈಸೂರಿಕ್ಕ್... ನಿಮಗೆ ಅವಿಯಲ್ ಮಾಟಿ... ತಿಳ್ವ್ ರಸಂ ಸ್ವಾರಸ್ಯಂ ತೋರಿಸಪೇಕು ಅನ್ ನಾನ್ ಕಷ್ಟಪಟ್ಟ್ ಕೆಲಸಂ ಮಾಟತಿರುವಾಗ... ನಾನ್ ಪೊರಿಚಿಕೊಟ್ಟ ವಕ್ಕರ್ಣೆ ಅಕುವ ಸಮಯಕ್ಕೆ ಸರಿಯಾಕಿ... ಈಕೆ ಕೂಕಿತರೆ... ಶಮ್ಮ್ಯೇಲ್ ಅಟಿಕೆ ಕೆಟ್ಟು ಓಕಿ... ನೀವು ನಾನ್ ಅಟಿಕೆಯವನು ಅಲ್ಲ ಅನ್ ನೆನಚಿಕೊಂಡು ಪೋಲೀಸಿಕೆ ಏಳಿಕಳಿಸಿತ್ರೆ... ನನ್ನ ಕತಿ ಏನು?

ಅಹೋಬ್ಳು: ಅಡಿಕೆ or no ಅಡಿಕೆ... ಅಲ್ರೀ! ನೀವು ಒಳಗೆ ಹೊಕ್ಕ ಮೇಲೆ ನೂರಾರು, ಅಲ್ಲ ಸಾವಿರಾರು ರೂಪಾಯಿ ನಗದು ಅಲ್ದೆ... ಲಕ್ಷಾಂತರ ಅಲ್ಲ ಹತ್ಸಾವಿರಾಂತ್ರ ಬಾಳುವ ಒಡವೆ ಇದ್ದ ಕೈ ಪೆಟ್ಟಿಗೇನೂ... ಅಲ್ದೆ ನನ್ನ ಹೆಂಡ್ತಿ... I mean ಅಮ್ಮಾವ್ರ ಹತ್ತಿಪ್ಪತ್ತು ಸೀರೆಗ್ಳೂ... ನೀವು ಈ ಮನೇಲಿ ಹೆಜ್ಜೆ ಇಟ್ಟಮೇಲೆ ಹೊಟ್ಹೋಗಿವೆ! ನಿಮ್ಮನ್ನ ಜಪ್ತಿ ಮಾಡ್ಲೇ ಬೇಕು.

ಅಯ್ಯರ್: (ಭ್ರುಕುಟಿಗಳನ್ನು ಊರ್ಧ್ವಗತಿಗೆ ಎತ್ತುತ್ತ) ಶಪ್ತಿ?

ರಂಗು: Let me help… ಅಂದ್ರೆ ನೀವು ಬರೋವಾಗ. Mr. … or sir… or His Highness… or Rajah Sahib… ಕೋಪಿಸಿಕೋಬೇಡಿ, Mr. Jahagirdar… ನನಗೆಲ್ಲಾ ಗೊತ್ತುಸಾರ್… ಅಹೋಬ್ಳು ನನ್ನ friendಉ! but positionಉ delicateಉ. Therefore ಎಲ್ರ situationಗೆ ನೀವು ಬಂದಾಗ ತಂದ trunkಉ luggageಉ ಇವುಗ್ಳಲ್ಲಿ…

ಅಯ್ಯರ್: (ಅಡ್ಡಮಾತಾಗಿ) ನೀವು ಏಳುವತ್ ನನಕ್ ಅರ್ತಮಾಕಲಿಲ್ಲ. "ಶಪತಿ" ಅಂತರೆ ಏನ್?

ಕಿಟ್ಟಿ: ಜಪ್ತಿಂದ್ರೆ… ನಿಮ್ಮನ್ನು ಹುಡುಕೋದು… ಈ ಕಳವು ಹೋದ ಸಾಮಾನುಗ್ಳು… ಅಂದ್ರೆ ಏನು, ಕೈ ಪೆಟ್ಗೇನೂ ಸೀರೆಗ್ಳೂ ನಿಮ್ದುತ್ರ…

ಅಯ್ಯರ್: ಸಾಮಿ; ನಾನ್ ಪಂದಾಗ ಒಂದು ಬಂಚೆ ಒತ್ತೆಯಾಗಿ ಒಣಕತ ಇತೆ ಪೇಕಡೇಲಿ. ಈಕ ನಾನ್ ಕಟ್ಟಿಕೊಂಡಿರುವ ತೋರತು ಮುಂಟು. ಉಟುಕಿ ಕೊಳ್ಳಿ! ಇತರಲ್ಲಿ ಏನು ಪೆಟಿಕೆ! ಏನು ಪೊಡವೆ!… ಏನ್ ಸಾಮಿ, ಲಾಯಿರ್ ಮನೆಕ್ caseತಂದ್ರೆ…!

ರಂಗು: ಅಹೋಬ್ಳು, ನನಗೇನೋ… real suspicion ಆ ಗೌಡನ್ಮೇಲೆ! ಬೆನ್ನು ತೋರಿಸ್ದೇನೇವೇಯೆ ಈ ಬಾಕ್ಲಿಂದ ಆ ಬಾಕ್ಲವರ್ಗೆ ಹಿಂದ್ಹಿಂದೆ ಹೆಜ್ಜೆ ಹಾಕ್ತ ನಡೆದದ್ದು ಒಂದೇ ಅಲ್ದೆ, ಒಂದ್ಕಂಬ್ಳೀಲಿ ದೊಡ್ಡದೊಂದು ಗಂಟಿದ್ಹಾಗೆ ಕಂಡು ಬಂತು… ಒಂದು ಜರ್ತಾರಿ… ಅಲ್ಲ ಸರಿಗೆ ಅಂಚಿನ ಹಸ್ರು ಬಟ್ಟೆ ಜೋಲಾಡ್ತಿದ್ದ ಹಾಗೆ…

ಜೀವು: (ಉಚ್ಚಧ್ವನಿಯಿಂದ) ಹಯ್ಯೋ, ಅದೇ ನನ್ನ ಆನಂದಾ ಸೀರೆ! ಹಿಡೀರೀಂದ್ರೆ ಈ ಗೌಡನ್ನ! ಗಂಟಿತ್ತೆ ಅವನು ಬರೋವಾಗ...?

ಅಹೋಬ್ಲು: ಗಂಟೂ ಇಲ್ಲ, ಮಣ್ಣೂ ಇಲ್ಲ. But then... ವಕಾಲತ್ sign ಮಾಡಿ... at least ಹೆಬ್ಬೆಟ್ಟು ಒತ್ತಿ... recordsಉ ಕಟ್ಟು ಕೊಟ್ಟೆಟ್ಟು ಹೋಗಿದಾನೆ. (ಕಟ್ಟನ್ನು ತೆಗೆದು ಮೇಜಿನ ಮೇಲೆ ಕುಕ್ಕಿ) ಹೀಗೆ ತನ್ನ ಊರು ಕೇರಿ ಕುಟುಂಬ ಕೊಂಪೆ ಗೊತ್ಮಾಡೊ ಕಟ್ನ ಇಟ್ಬಿಟ್ಟು ಕಳ್ತನ ಮಾಡೋ ಮಂಕಾದಾನೆ! Besides ನನ್ನ, the cleverest man in the townನ್ನ, ಒಬ್ಬ ಹಳ್ಳಿ ಗಮಾರ ಹೀಗೆ ಗುಮಾಯ್ಸೋಕೆ try ಮಾಡ್ಯಾನೇ? try ಮಾಡಿದ್ರೂನೂ succeed ಮಾಡ್ಯಾನೆ? ಅವನ ಹಟ್ಟಿ ಹೊಲ ಕಳ್ಕೊಂಡು, ಅದನ್ನೆಲ್ಲಾ ತಿರುಗಿ ಬರೊ information ಆ ಕಟ್ನಲ್ಲಿ...

ರಂಗು: (ಕಟ್ಟನ್ನು ಬಿಚ್ಚಿ ಕಾಗದಗಳನ್ನು ತಿರುವುಹಾಕುತ್ತ) ದೇವ್ರೇಗತಿ, ಅಹೋಬ್ಲು! ಈ ಕಟ್ಟೆಲ್ಲಾ ಬರಿ Blank paperಉ! ಇನ್ನು ಹೇಗೆ ಹಿಡಿಯೋದು ಅವನ್ನ! ಈ paper ಎಲ್ಲಾ ಬರೀ Fools Cap.

ಜೀವು: (ಅಹೋಬ್ಲುವಿಗೆ)—Fools Cap ಅಂದ್ರೆ ಏನು?. . . ಅರ್ಥವೇನು?

ಅಹೋಬ್ಲು:(ರೇಗಿ) ಅಲ್ಕಾಣೆ! ಒಬ್ಬ ಗಮಾರ... ಹಳ್ಳಿ ಗಮಾರ ಹುಲಿಯೂರ್ ಆಹೋಬಲ್ರಾಯನ ಮನೇಗೆ ಬಂದು, daylightನಲ್ಲಿ cash box ವಗ್ಗೈರೆ ಲಪ್ಪಾಯಿಸ್ಬಿಟ್ಟು, ಘಾಟಿ ಆದ ನನ್ನ ಗುಮಾಯಿಸಿ ಹೋದ ಅವಸ್ಥೇಲಿ ಇರೋವಾಗ... Fools Cap ಅಂದ್ರೆ ಅರ್ಥವೇನೂಂತ ಕೇಳ್ತೀಯೆಲ್ಲಾ!

ಜೀವು: ಹಾಗಂದ್ರೇನರ್ಥ?

ಅಹೋಬ್ಲು: Fools Cap ಅಂದ್ರೆ... ಪೆದ್ದುಗಳಿಗೆ ಹಾಕೊ ಟೋಪಿ.

ಜೀವು: ಕಾಗದ... ಟೋಪಿ ಹೇಗಾಗುತ್ತೆ?!

ಅಹೋಬ್ಲು: (ದಂತಾವಳಿಯನ್ನು ಕಟಕಟನೆ ಕಡಿದು ಕನಲಿ) ಕಾಗದಾನ ಸಕ್ಕರೆ ಪಟ್ಟದ ಹಾಗೆ ಸುತ್ತಿ ಮಂಕಿನ ತಲೇ ಮೇಲಿಡೋದು . . . Fools Cap

ಜೀವು: (ಆಹೋಬ್ಲುವು ಹೇಳುತ್ತಿರುವಾಗಲೇ ಕಟ್ಟಿನ ಕಾಗದವೊಂದನ್ನು ಕಸಿದುಕೊಂಡು, ಸಕ್ಕರೆ ಪಟ್ಟದಂತೆ ಸುತ್ತಿ ಅಹೋಬ್ಲುವಿನ ತಲೆಯ ಮೇಲಿಡುತ್ತಾ) ಇನ್ಮೇಲಾದ್ರು ಈ ಬಂಡ್ಬಾಳ್ವಿಲ್ಲದ ಬಡಾಯೀನ ಬಿಟ್ಟು...

ಅಹೋಬ್ಲು: (ಮುದ್ರೆ, ಧ್ವನಿ, ಭಾಷೆ, ಅಭಿನಯಗಳಿಂದ ಲಜ್ಜೆ, ರೋಷ, ಜುಗುಪ್ಸೆ ಇತ್ಯಾದಿಗಳನ್ನು ತೋರ್ಪಡಿಸುತ್ತ) ದಮ್ಮಯ್ಯ ಜೀವು! ನಿನ್ನ Curtain lectureಉ ಯಥಾ ಪ್ರಕಾರ ಆಗ್ಲಿ!... ನೋಡ್ತಿಧಾರೆ ಎಲ್ರು!... ನಾಚಿಕೆ ಆಗುತ್ತೆ! Clientನೂ friendsನೂ, ನನ್ನ creditನೂ consider ಮಾಡು!

ಜೀವು: ನೀವ್ಕೆಡೋದೆಲ್ಲಾ ನಿಮ್ಮ ಬಡಾಯಿ... ನಿಮ್ಮ ಇಂಗ್ಲಿಷ್ ಬೆರಸಿದ ಕನ್ನಡ...

(ಎಂದು ಜೀವು ಮಾತಾಡುತ್ತಿರುವಾಗಲೇ ಫರದೆಯು ಬೀಳುವುದು)